International Journal of Kannada Research 2024; 10(3): 45-52

International Journal of Kannada Research
www.kannadajournal.com

ISSN: 2454–5813
IJKR 2024; 10(3): 45-52
© 2024 IJKR
www.kannadajournal.com
Received: 15-06-2024
Accepted: 18-07-2024

**ಡಾ. ಪಂಡಿತ. ಕೆ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ಡಾ. ಪಂಡಿತ. ಕೆ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಶಾಸನಗಳಲ್ಲಿ ಕನ್ನಡ ಸಂಸ್ಕೃತಿ

**ಡಾ. ಪಂಡಿತ. ಕೆ. ರಾಠೋಡ**

## ಪೀಠಿಕೆ
ಸಾಹಿತ್ಯ ಕೃತಿಗಳು ಕವಿಯ ಕಲಾತ್ಮಕತೆಯನ್ನು ಉಣಬಡಿಸಿದರೆ, ಶಾಸನಗಳು ದಾಖಲಾತ್ಮಕ ಸಂಗತಿಗಳನ್ನು ಅಭಿವ್ಯಕ್ತಿಸುತ್ತವೆ. ನಮ್ಮ ಪೂರ್ವಿಕರ ಚರಿತ್ರೆಯನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವುದು ಈ ಎರಡು ಶಿಸ್ತುಗಳನ್ನು ಹೊಂದಿದ ಓದುಗನಿಂದ ಸಾಧ್ಯವಾಗುತ್ತದೆ. ಪ್ರಾಚೀನ ಕಾಲದ ರಾಜರು ಹಾಕಿಸಿದ ಶಾಸನದ ಬರೆವಣಿಗೆ ಎಷ್ಟೇ ಸಂಪ್ರದಾಯಬದ್ಧವಾಗಿದ್ದರೂ ಆಯಾ ಕಾಲದ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಘಟನೆಗಳ ಪ್ರತಿಧ್ವನಿಯಾಗಿರುತ್ತವೆ. ಆದ್ದರಿಂದ ಕನ್ನಡದ ರಾಜಕೀಯ ದಾಖಲೆಗಳಾದ ಶಾಸನಗಳು ಮಹಾಸಮುದ್ರ ಎಂಬಂತೆ ಗೋಚರಿಸುತ್ತವೆ. ಹೀಗೆ ಗೋಚರಿಸುವ ಶಾಸನ ಸಮುದ್ರದಲ್ಲಿ ಏನಿಲ್ಲ ಎಂದು ಹುಡುಕುವುದಕ್ಕಿಂತ, ಏನೇನು ಇದೆ ಎಂದು ತೀವ್ರವಾಗಿ ಹುಡುಕುವುದು ಮುಖ್ಯವಾಗಿದೆ. ಈ ಶಾಸನಗಳು ಎಷ್ಟೇ ದೊಡ್ಡ ಪ್ರಮಾಣದಲ್ಲಿ ಇವೆ ಎಂದರೂ ಅವು ಗ್ರಂಥಗಳಲ್ಲ ಎಂಬುದು ಮನವರಿಕೆಯಾಗುತ್ತದೆ. ಹಾಗಾಗಿ ಶಾಸನಗಳಲ್ಲಿ ಎಲ್ಲ ವಿಷಯಗಳು ಒಂದೇ ಕಡೆ ಸಿಗುವುದಿಲ್ಲ. ನೂರಾರು ಶಾಸನಗಳಲ್ಲಿ ಅವು ಚದುರಿ ಹೋಗಿರುತ್ತವೆ. ಇದನ್ನು ಸಂಕಲಿಸುವ ಪರಿಣತಿ, ಅವುಗಳನ್ನು ಜೋಡಿಸುವ ಚಿಕಿತ್ಸಕ ಬುದ್ಧಿ ಅದನ್ನು ಸಂಯೋಜಿಸುವ ಯೋಜನಾ ಕಲೆಗಾರಿಕೆ, ನಿರೂಪಿಸುವಂಥ ಸ್ಪಷ್ಟ ಪಾಂಡಿತ್ಯ ಮುಂತಾದ ಗುಣ ವಿಶೇಷಣಗಳು ಈ ಕ್ಷೇತ್ರದ ಸಂಶೋಧಕನಿಗೆ ಬೇಕಾಗುತ್ತದೆ.

## ಶಾಸನಗಳು ವಿಸ್ಮೃತಿಗೊಂಡ ಚರಿತ್ರೆಯ ಅಸ್ಮಿತೆಯನ್ನು ತಿಳಿಸುವ ಬಹಿರಂಗ ದಾಖಲೆಗಳು
ನಮ್ಮ ನಾಡಿನ ಶಿಲಾಶಾಸನಗಳು ಒಂದು ಕಾಲಘಟ್ಟದ ಬಹಿರಂಗ ದಾಖಲೆಗಳು. ಇಷ್ಟವಿರಲಿ, ಇಷ್ಟವಿಲ್ಲದೆ ಇರಲಿ ಯಾರೂ ಬೇಕಾದರೂ ಈ ಶಾಸನಗಳನ್ನು ಓದಬಹುದು. ಇವು ಸದಾ ತೆರೆದ ಪುಸ್ತಕಗಳಿದ್ದಂತೆ. ಹೀಗಾಗಿ ಜಾತಿ–ಮತ, ಧರ್ಮಗಳ ಭೇದ ಭಾವವಿಲ್ಲದೆ ಆಸಕ್ತಿ ಇದ್ದ ಜನತೆ ಓದುತ್ತ ಬಂದಿದೆ. ತಾಮ್ರ ಮತ್ತು ಕಲ್ಲಿನ ಮೇಲೆ ಬರೆದ ಶಾಸನಗಳು, ಶಾಸನ ಆಸಕ್ತರನ್ನು ಬಿಟ್ಟರೆ ಆಸಕ್ತಿ ಇಲ್ಲದವರಿಗೆ ಸದಾ ಮುಚ್ಚಿಟ್ಟ ಪುಸ್ತಕಗಳಾಗಿ ಕಂಡಿವೆ. ಈ ಮುಚ್ಚಿಟ್ಟ ಪುಸ್ತಕದ ಹಾಳೆಗಳಂತೆ ಅಲ್ಲೊಂದು, ಇಲ್ಲೊಂದು ಶಾಸನಗಳನ್ನು ಬರೆದ ಕವಿಗಳು ಕರ್ನಾಟಕ, ಕನ್ನಡ ವೆಂಬಂತೆ, ಭಾರತೀಯ ಸಾಹಿತ್ಯಕ್ಕೂ ಮಹತ್ವದ ಸ್ಥಾನವನ್ನು ದೊರಕಿಸಿಕೊಟ್ಟಿದ್ದಾರೆ. ರಾಜಕೀಯ ಚರಿತ್ರೆಯ ದಾಖಲೆಗಳಾಗಬೇಕಾಗಿದ್ದ ಶಾಸನಗಳನ್ನು ಕವಿಗಳು ತಮ್ಮ ಪ್ರತಿಭಾ ಕುಂಚದಿಂದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಆವರಣವನ್ನು ಕಲ್ಪಿಸುತ್ತ ಬಂದಿದ್ದಾರೆ.

## ಶಾಸನ ಸಾಹಿತ್ಯದ ಹುಟ್ಟಿನ ಮೊಳಕೆಗಳು
ಪ್ರಾಚೀನ ಕಾಲದ ಶಾಸನಗಳು ಕನ್ನಡ ನಾಡಿನ ಸಾಂಸ್ಕೃತಿ ಸಂಪತ್ತಿನ ತೋರುಗಂಬಗಳಿದ್ದಂತೆ. ಇವುಗಳನ್ನು ಸೃಜಿಸಿದ ಅನೇಕ ಕವಿಗಳು ಸಂಸ್ಕೃತ–ಕನ್ನಡ ಭಾಷೆಗಳ ಒಳಮರ್ಮವನ್ನು ಅರಿತ ವಿದ್ಯಾವಂತರೇ ಆಗಿದ್ದರು. ಅದರಲ್ಲಿಕೆಲ ಕವಿಗಳಿಗೆ ರಾಜರ, ಸಾಮಂತರ ಕೃಪೆ ದೊರಕಿ ನಿರಂತರ ಶಾಸನಗಳನ್ನು ಬರೆಯುತ್ತ ಬಂದರು. ಒಂದುಕಾಲದಲ್ಲಿ ವ್ಯಾವಹಾರಿಕ ಪ್ರಯೋಜನೆಗಾಗಿ ಶಾಸನಗಳು ರಚನೆ ಆದವು. ಶಾಸನ ಸಾಹಿತ್ಯದ ಬೆಳವಣಿಗೆಯನ್ನುಕುರಿತುಚಾರಿತ್ರಿಕ ವಿಮರ್ಶೆ ಮಾಡುವುದೇ ಆದರೆ ಇದಕ್ಕೆ ಪೂರಕವೆಂಬಂತೆ ಶಾಸನ ಸಾಹಿತ್ಯದಿಂದಲೇ ಆಕರ ಎತ್ತಿಕೊಳ್ಳಬೇಕಾಗುತ್ತದೆ. ಕಾಲಗಣನೆಯ ಸ್ಪಷ್ಟ ಪರಿಕಲ್ಪನೆಗಳು ರಾಜಮಾರ್ಗದ ಮೇಲೆ ನಡೆದು ಹೋಗುತ್ತಿರುವಶಾಸನ ಸಾಹಿತ್ಯವು ಆ ಆ ಕಾಲದ ಕಿರಿದಂತರದಲ್ಲಿ ತಾನು ಇಕ್ಕಿದ ಹೆಜ್ಜೆಗಳ ಗುರುತುಗಳನ್ನು ಮೂಡಿಸುತ್ತ ಬಂದವು.

ಕನ್ನಡ ಶಾಸನಸಾಹಿತ್ಯ ಚರಿತ್ರೆ ಕಟ್ಟುವಾಗ ಬೇಲೂರು ತಾಲೂಕಿನ'ಯಗಚಿನದಿ' (ಈ ನದಿ ಈಗ ಅಲ್ಲಿಲ್ಲ) ದಂಡೆಯ ಮೇಲೆ ಇರುವ ಕದಂಬರ ಕಕುತ್ಸವರ್ಮನು ಹಾಕಿಸಿದ 'ಹಲ್ಮಿಡಿ'(೪೫೦) ಶಾಸನವನ್ನು ಪ್ರಥಮ ಬಾರಿಗೆ ಎಂ.ಎಚ್ ಕೃಷ್ಣ (೧೯೩೬) ಅವರು ಶೋಧಿಸಿ ಪ್ರಕಟಿಸಿದರು. ಈ ಶಾಸನಕ್ಕೆ ಪ್ರಥಮ ಪೂಜೆ ಸಲ್ಲುತ್ತದೆ. ಇದು ಕನ್ನಡದ ಮೊತ್ತ ಮೊದಲ ಅಸ್ಮಿತೆ. ಈ ಗದ್ಯ ಶಾಸನಕ್ಕೆ ಕನ್ನಡ ಸಾಹಿತ್ಯದಲ್ಲೇ ಹಿರಿದಾದ ಸ್ಥಾನವಿದೆ. ೬೦ ಭಾಗ ಸಂಸ್ಕೃತ, ೨೦ ಭಾಗ, ಕನ್ನಡ ಭಾಷೆಯಿಂದ ಕೂಡಿದ ಈ ಶಾಸನದ ಮೇಲೆ ಸಂಸ್ಕೃತ ಪ್ರಭಾವ ಎಷ್ಟು ಆಗಿದೆ ಎಂಬುದನ್ನು ತಿಳಿಸುತ್ತದೆ. ಈ ಹಲ್ಮಿಡಿ ಶಾಸನ ಮತ್ತು ಮಂಗಳೀಶನ ಬಾದಾಮಿಯ ಶಾಸನ ಇವು ಗದ್ಯದಲ್ಲಿದ್ದರೆ, ತಮ್ಮಟಕಲ್ಲಿನ ಶಾಸನ, ಶ್ರವಣಬೆಳಗೊಳದ ಶಾಸನಗಳು ಪದ್ಯದಲ್ಲಿವೆ. ತಮ್ಮಟಕಲ್ಲಿನ ಶಾಸನವನ್ನು ಕನ್ನಡ ಸಾಹಿತ್ಯದಲ್ಲಿ ಕ್ವಚಿತ್ತಾಗಿ ಪ್ರಯೋಗಿಸಲಾದ 'ಸುಮಂಗಲಿ' ಇಲ್ಲವೆ 'ನತ್ತುಟಕ' ವೃತ್ತದಲ್ಲಿ ಬರೆಯಲಾಗಿದೆ[೧] ಶ್ರವಣಬೆಳಗೊಳದ ಶಾಸನಗಳು, ಸ್ರಗ್ಧರಾ, ಮತ್ತೇಭವಿಕ್ರೀಡಿತ ಮುಂತಾದ ಖ್ಯಾತಕರ್ನಾಟಕ ಷಡ್ವೃತ್ತಗಳಲ್ಲಿ ಬರೆಯಲಾಗಿದ್ದರೆ ಕಪ್ಪೆ ಅರಭಟ್ಟನ ವ್ಯಕ್ತಿ ಚಿತ್ರವನ್ನು ಪ್ರದರ್ಶಿಸುವ ಬಾದಾಮಿಯ ಶಾಸನವು ದೇಶೀಯ ಛಂದವಾದ ತ್ರಿಪದಿಯಲ್ಲಿ ರಚಿತವಾಗಿದೆ. ಅಂದರೆ ನೃಪತುಂಗನ ಕಾಲಕ್ಕೆ ಈ ಶಾಸನ ಸಾಹಿತ್ಯ ಹುಲುಸಾಗಿ ಬೆಳೆದಿತ್ತು ಎಂದು ಹೇಳಬಹುದು. ಈ ಶಾಸನದ ಮೂಲಕ ಕನ್ನಡ ಸಾಹಿತ್ಯದ ಹುಟ್ಟಿನ ಮೊಳಕೆಗಳನ್ನು ಕಾಣಬಹುದು.

**ಶಾಸನ ಸಾಹಿತ್ಯ ವಿಕಾಸಹೊಂದಿದ ಪರಿಕಲ್ಪನೆ**

ಈ ಶಾಸನ ಸಾಹಿತ್ಯದ ವಿಕಾಸ ಹೇಗಾಯಿತು ಎಂಬುದರ ಬಗ್ಗೆ ಹೇಳುವುದಾದರೆ. ಈ ಮುಂದಿನ ಮಾತುಗಳನ್ನು ಗಮನಿಸಬಹುದು. ಬದಾಮಿ ಚಾಲುಕ್ಯರ ಆಳ್ವಿಕೆಯ ಸಂದರ್ಭದಲ್ಲಿ ಕನ್ನಡ ಶಾಸನ ಸಾಹಿತ್ಯ ಇನ್ನೂ ಶೈಶವಾವಸ್ಥೆಯಲ್ಲಿದ್ದಿತು. ಈ ಕಾಲದ ಶಾಸನಗಳಿಗೆ ಕನ್ನಡ ಭಾಷೆಯ ಸಂಸ್ಕಾರ ಅಷ್ಟಾಗಿ ಪ್ರಾಪ್ತವಾಗಿರಲಿಲ್ಲ ವೆನಿಸುತ್ತದೆ. ಇವರ ಕಾಲದಲ್ಲಿ ಬರವಣಿಗೆಯ ವಿಧಾನವು ನಿಶ್ಚಿತವಾಗದೇ ಶಾಸನಗಳು ವಿಸ್ತಾರಕ್ಕಿಂತ ಸಂಕ್ಷಿಪ್ತವಾಗಿದ್ದವು. ಅಂದರೆ ೮-೧೦ಸಾಲುಗಳಲ್ಲಿ ವಿಷಯವನ್ನು ಸಂಕೀರ್ಣಗೊಳಿಸಿ ಮುಕ್ತಾಯ ಮಾಡುವ ಪ್ರವೃತ್ತಿ ಹೆಚ್ಚಾಗಿತ್ತು.

ಬಾದಾಮಿ ಚಾಲುಕ್ಯರ ಅರಸೊತ್ತಿಗೆ ಪತನವಾದ ಬಳಿಕ ಮಾನ್ಯಖೇಟವನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಲು ಬಂದ ರಾಷ್ಟ್ರಕೂಟರ ಕಾಲದಲ್ಲಿ ಕಲೆ ದೃಷ್ಟಿಯಿಂದ ಶಾಸನ ರಚನಾ ದೃಷ್ಟಿಯಿಂದ ಹೆಚ್ಚು ಹೆಚ್ಚಾಗಿ ಶಾಸನಗಳು ರಚನೆ ಆಗತೊಡಗಿದವು. ಈ ಮೂಲಕ ಶಾಸನಗಳನ್ನು ಬರೆಯುವ, ಬರೆಸುವ ಒಂದು ಉಪಕ್ರಮ ತೀವ್ರವಾಗಿ ಬೆಳೆದು ಬಂದಿತು. ಶಾಸನಗಳಲ್ಲಿ ಅಲ್ಲಲ್ಲಿ ವಿವರಗಳು ಹೆಚ್ಚಾಗುತ್ತಿದ್ದಂತೆ ಶಾಸನ ಭಾಷೆ ಹದಗೊಂಡು ಸಂಸ್ಕಾರಗೊಳ್ಳಹತ್ತಿತು. ಕ್ರಮೇಣ ರಾಜರ ಬಿರುದಾವಳಿ, ಆಯಾ ಪ್ರದೇಶಗಳ ವರ್ಣನಾರೂಪದ ನಿರೂಪಣೆಯ ದಾರಿ ಹಿಡಿದು ಆ ನಿರೂಪಣೆಯಲ್ಲಿ ಕಾವ್ಯದ ತನಿರಸ ಹೆಚ್ಚಾಗತೊಡಗಿತು. ಅರಸರ, ಯುವರಾಜರ, ಸಾಮಂತರ, ಮಾಂಡಲಿಕರ ಹೆಸರುಗಳ ಅಕ್ಕಪಕ್ಕದಲ್ಲಿ ವಿವರಣಾತ್ಮಕ ಪ್ರಶಸ್ತಿಗಳು, ಆತ್ಮ ಪ್ರಶಂಸೆಗಳು ಶಾಸನಗಳಲ್ಲಿ ರಾರಾಜಿಸಹತ್ತಿದವು.

ಈ ಹೊತ್ತಿಗೆ ರಾಷ್ಟ್ರಕೂಟರ ಒಂದನೆಯ ಅಮೋಘವರ್ಷ ನೃಪತುಂಗನ ಆಳ್ವಿಕೆ ಪ್ರಾರಂಭವಾಗಿತ್ತು. ಈ ಕಾಲದ ಕನ್ನಡ ಗದ್ಯವು ಶಾಸನದಲ್ಲಿ ಶ್ರೇಷ್ಠ ಮಟ್ಟಕ್ಕೆ ಏರಿದುದು ಅಚ್ಚರಿಯೇನಲ್ಲ. ಇದು ಕಾಲಕ್ರಮೇಣ ಶಾಸನಕವಿಯ ಒಲವು ಗದ್ಯಕ್ಕಿಂತ ಸೊಗಸಿನ ಪದ್ಯರಚನೆಯ ಕಡೆಗೆ ಹೆಚ್ಚುತ್ತ ಹೋಯಿತು. ಶಾಸನದಲ್ಲಿ ವ್ಯಕ್ತವಾದ ಪ್ರಧಾನ ವ್ಯಕ್ತಿಗಳು, ದಾನದ ವಿವರ ದಾನಪಡೆದುಕೊಂಡ ವ್ಯಕ್ತಿಗಳ ವರ್ಣನೆಗಳಲ್ಲದೆ ಊರ ವರ್ಣನೆಗಳು ನಿರೂಪಣೆ ಆಗತೊಡಗಿದವು. ಶಾಪಾಶಯದ ಫಲಶ್ರುತಿ, ಅಪಹಾರಕನಿಂದೆ ಇತ್ಯಾದಿ ಅಂಶಗಳು ಬ್ರಾಹ್ಮಣರ ಪೂರ್ವವೃತ್ತಾಂತವನ್ನು ವಿವರಿಸುವ ಶಾಸನಗಳು ಬಹುಕಾಲ ಅಥವಾ ಚಿರಕಾಲ ಬಾಳಲಿ ಎಂಬ ಹಾರೈಕೆಗಳು ಪ್ರಕಟವಾಗಹತ್ತಿದವು. ಆಯಾ ಕಾಲದ ಶಾಸನ ಪಠ್ಯಗಳನ್ನು ಗಮನಿಸುತ್ತ ಹೋದಾಗ ವ್ಯಾವಹಾರಿಕ ವಸ್ತುಗಳನ್ನು ಕೂಡ ವ್ಯಾವಹಾರಿಕ ಪದ್ಯಗಳಿಂದ ನಿರೂಪಿಸುವ ಒಂದು ಸಂಪ್ರದಾಯ ಈ ಕಾಲದಲ್ಲಿ ರೂಢಿಗೆ ಬರುತ್ತಲಿದ್ದಿತು. ಇಂತಹ ಗದ್ಯ-ಪದ್ಯಗಳನ್ನೆಲ್ಲ ಕಾವ್ಯವೆಂದು ಗುರುತಿಸುವುದು ಅಸಾಧ್ಯವಿದ್ದರೂ ಇದರಿಂದ ಕಾವ್ಯದ ಒಂದು ಲಕ್ಷಣವಾದ ಅಲಂಕಾರಿಕ ಛಂದೋಬದ್ಧರಚನೆ ಆ ಕಾಲದ ಶಾಸನ ಕವಿಗಳ ಮನಸ್ಸನ್ನು ಹೇಗೆ ಆಕರ್ಷಿಸುತ್ತಲಿದ್ದಿತು ಎಂಬುವುದು ಅರಿವಿಗೆ ಬರುತ್ತದೆ.

ದಿನಕಳೆದಂತೆ ಕಾವ್ಯಮಯವಾಗಿ ಶಾಸನಗಳನ್ನು ಬರೆಯುವ ಪ್ರವೃತ್ತಿ ಹೆಚ್ಚಾಗುತ್ತ ಬಂದಿತು. ಅಷ್ಟೊತ್ತಿಗೆ ರಾಷ್ಟ್ರಕೂಟ ಅರಸರು ಪತನವಾಗಿ, ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ, ರಟ್ಟರ, ನೊಳಂಬ ಮುಂತಾದ ಅರಸರು ಒಂದರ ಮೇಲೊಂದಾಗಿ ಉದಯವಾಗುತ್ತ ಬಂದರು. ಇವರೆಲ್ಲರ ಕಾಲದಲ್ಲಿ ಶಾಸನದಲ್ಲಿ ಕಾವ್ಯ ಅತ್ಯಂತಿಕವಾಗಿ ವಿಕಾಸವಾಗುವತ್ತ ನಡೆಯಿತು. ಅಂದರೆ ಶಾಸನಗಳು ಅತ್ಯಂತ ವಿಸ್ತಾರವಾಗಿ ರಚನೆಯಾಗತೊಡದವು. ಈ ವಿಸ್ತಾರ ರಾಜರ ಪ್ರಶಸ್ತಿ, ಅಂಕಿತ ನಾಯಕರ ವಂಶವೃತ್ತಾಂತಗಳಿಂದಲೂ ದಾತೃ, ಪ್ರತಿ ಗ್ರಹೀತಗಳ ವಿವರವಾದ ವರ್ಣನೆಗಳಿಂದ ರಾರಾಜಿಸತೊಡಗಿದವು. ಈ ಹೊತ್ತಿಗೆ ಶಾಸನಗಳು ಗದ್ಯ-ಪದ್ಯಗಳಿಂದ ಮಿಶ್ರಿತವಾದ ಚಂಪೂ ಕಾವ್ಯದ ಹಾದಿಯನ್ನ ಹಿಡಿದವು. ಉದಾ: ಲಕ್ಕುಂಡಿ, ಸಿರಸಂಗಿ, ಬೆಳತೂರ ಶಾಸನಗಳಂತವು ಒಂದು ರೀತಿಯಲ್ಲಿ ಲಘು ಚಂಪೂಕಾವ್ಯಗಳಂತೆ ರಚನೆ ಆದವು.

ಈ ಶಾಸನ ಕವಿಗಳಲ್ಲಿ ಅನೇಕರು ಉತ್ತಮ ವರ್ಗದ ಕವಿಗಳಿದ್ದು, ರಾಜರಿಗೂ ರಾಜ್ಯಾಧಿಕಾರಿಗಳಿಗೆ ವಿಶ್ವಾಸವುಳ್ಳವರಾಗಿದ್ದರಿಂದ ತಮಗೆ ಆಶ್ರಯ ನೀಡಿದ ಆಯಾ ರಾಜರ ಪ್ರಶಸ್ತಿ, ಅವರು ಮಾಡಿದ ಸಾಧನೆ ಸಿದ್ಧಿಗಳನ್ನು ವರ್ಣನಾತ್ಮಕವಾಗಿ ಶಾಸನಗಳನ್ನು ರಚಿಸಲು ಉದ್ಯುಕ್ತರಾದರು. ಭಾಷೆಯ ದೃಷ್ಟಿಯಿಂದ ಅರ್ಥಚಮತ್ಕಾರಿಕೆ, ಕಾವ್ಯದ ಗಾಂಭೀರ್ಯ, ಕಾವ್ಯದ ದೃಷ್ಟಿಯಿಂದ ವಾಸ್ತವಿಕತೆ, ಕಲ್ಪನಾಶಕ್ತಿಯ ವೈವಿಧ್ಯತೆ ಮೊದಲಾದ ಗುಣಗಳಿಂದ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನಗಳಲ್ಲಿ ಸೃಜನೆಗೊಂಡ ಶಾಸನ ಸಾಹಿತ್ಯ ಪೂರ್ವದ ಶತಮಾನಗಳಲ್ಲಿ ನಿರ್ಮಿತಿಗೊಂಡ ಸಾಹಿತ್ಯಕ್ಕಿಂತ ಮಿಗಿಲೆನಿಸುವ ರೀತಿಯಲ್ಲಿ ರಚನೆಯಾದವು.

ಅಷ್ಟೊತ್ತಿಗೆ ಈ ಮೇಲೆ ಹೇಳಿದ ಅರಸು ಮನೆತನಗಳು ಪತನಗೊಂಡು ೧೩-೧೪ನೆಯ ಶತಮಾನಗಳಲ್ಲಿ ೧೧ ಮತ್ತು ೧೨ನೆಯ ಶತಮಾನದ ಶಾಸನ ಸಾಹಿತ್ಯದ ಕಾವ್ಯ ಪರಂಪರೆಯಂತೆ ಮುಂದುವರಿಯಿತಾದರೂ ೧೪ನೆಯ ಶತಮಾನದಲ್ಲಿ ವಿಜಯ ನಗರ ಅರಸರು ಉದಯವಾಗುತ್ತಿದ್ದಂತೆ ಒಂದು ರೀತಿಯಲ್ಲಿ ೧೧, ೧೨, ೧೩ನೆಯ ಶತಮಾನದ ಕವಿಗಳ ಅನುಕರಣೆ ಎಂಬಂತೆ ಶಾಸನ ಸಾಹಿತ್ಯ ರಚನೆಯಾಗಿ ಮೊದಲಿನ ಅಂದರೆ ೧೧, ೧೨ ನೆಯ ಶತಮಾನದಲ್ಲಿ ಶಾಸನ ಸಾಹಿತ್ಯದ ಕಾಂತಿಗೆ ನಿಲ್ಲುವಂತಹ ಕಾವ್ಯ ಶಕ್ತಿ ಕಳೆದುಕೊಳ್ಳ ತೊಡಗಿತು. ಹೀಗೆ ಕಾವ್ಯಾಂಶ ಗುಣದಿಂದ ವಿಜಯನಗರ ಮತ್ತು ವಿಜಯನಗರ ಅರಸೋತ್ತರ ಕಾಲದಲ್ಲಿ ಇಳಿಮುಖದೆಡೆಗೆ ಸಾಗಿ ಹೀನಸ್ಥಿತಿಗೆ ಬಂದು ನಿಂತಿತು. ಶಾಸನಗಳ ಸೊಗಸಾದ ರಚನೆ, ರಂಜಕತೆಗಳಂತಹ ಸಾಹಿತ್ಯಿಕ ಗುಣಗಳ ಮಾತು ಒತ್ತಟ್ಟಗಿರಲಿ ಬರವಣಿಗೆಯ ಸಾಮಾನ್ಯ ವೈಲಕ್ಷಣ್ಯಗಳಾದ ಭಾಷಾ ಶುದ್ಧತೆ ಮತ್ತು ನಿರ್ದುಷ್ಟ ಪ್ರಯೋಗಗಳಿಗೂ ಲೋಪಗಳು ಅಂಟಿಕೊಂಡವು. ವಿಜಯನಗರ ಸ್ಥಾಪನೆಯ ಪೂರ್ವೋತ್ತರ ಅನಾಯಕತೆಯ ಕೊರತೆ ಮತ್ತು ಪರಕೀಯರ ಆಕ್ರಮಣ ಮತ್ತು

ದೇಶದಲ್ಲಿ ತಲೆದೋರಿದ ರಾಜಕೀಯ, ಧಾರ್ಮಿಕ ಅರಾಜಕತೆಯ ಗೊಂದಲದ ಗೂಡಾದ ಕಾರಣವಾಗಿ ಶಾಸನ ಸಾಹಿತ್ಯವು ಶಿಥಿಲಾವಸ್ಥೆಗೆ ಬಂದು ನಿಂತಿತು.

ಕಾಲಕಾಲಕ್ಕೆ ಜರಗುತ್ತ ಬಂದ ದೊಂಬಿ, ಕಾಳಗ, ಹೋರಾಟ, ಗಲಭೆಗಳು ಉಂಟಾಗಿ ಸಾಹಿತ್ಯ ರಂಗದಲ್ಲಿ ಹೊಸ ಒಲವುಗಳು ಉಂಟಾಗಿ ಶಾಸನ ಸಾಹಿತ್ಯದ ಪೂರ್ವಪರಂಪರೆಯು ಅಳಿಯಿತು. ಇಷ್ಟೊತ್ತಿಗೆ ಲೇಖನ ಸಾಮಗ್ರಿಗಳ ಆವಿಷ್ಕಾರಗಳಾದವು. ಅದೇನೇ ಕಾರಣಗಳಿರಲಿ ವಿಜಯನಗರದಿಂದ ಈಚೆಯ ಕಾಲದ ಅಂದರೆ ೧೪ರಿಂದ ೧೭ನೆಯ ಶತಮಾನದ ವರೆಗಿನ ಶಾಸನ ಸಾಹಿತ್ಯವು ಸಾಹಿತ್ಯ ಚರಿತ್ರೆಯಲ್ಲಿ ನಿಶ್ಚಿತವಾದ ಗಣ್ಯಸ್ಥಾನ ಪಡೆದುಕೊಳ್ಳುವಲ್ಲಿ ವಿಫಲವಾಯಿತು. ೧೭ನೇ ಶತಮಾನಕ್ಕೆ ಬರುವಷ್ಟರಲ್ಲಿ ಮುಮ್ಮದೀಯರ, ಬ್ರಿಟಿಷರ ಆಡಳಿತದಿಂದಾಗಿ ನಮ್ಮ ನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ವೈಭವಗಳು ಅನೇಕ ಸ್ಥಿತ್ಯಂತರಗಳಿಗೆ ಕಾರಣವಾಗಿ ನಾಮಾವಶೇಷವಾದಂತೆ ಶಾಸನಗಳು ಸಹ ತಮ್ಮ ಗೌರವವನ್ನು ಕಳೆದು ಕೊಂಡುಬಿಟ್ಟವು.

**ಕನ್ನಡ ಕುಲದ ಅರಸರು**

ಗತಕಾಲದ ಕರ್ನಾಟಕವನ್ನು ಮುನ್ನಡೆಸಿದ ಶಕ್ತಿಗಳಲ್ಲಿ ಪ್ರಭುತ್ವ ಶಕ್ತಿ ಬಹುದೊಡ್ಡದಾಗಿದೆ. 'ರಾಜಾಕಾಲಸ್ಯ ಕಾರಣಂ' ಎಂಬ ಪ್ರಾಚೀನ ಉಕ್ತಿಗೆ ಮಹತ್ವದ ಸ್ಥಾನವಿದೆ. ಈ ಹಿನ್ನೆಲೆಯಲ್ಲಿ ಆಯಾ ಕಾಲದಲ್ಲಿ ಉದಯವಾಗಿ ಬಂದ ಪ್ರತಿಯೊಂದು ರಾಜಮನೆತನಗಳು ಸಾಹಿತ್ಯಕ, ಸಾಮಾಜಿಕ, ಧಾರ್ಮಿಕವಾಗಿ ಬಹುಮುಖ್ಯ ಪಾತ್ರ ನಿರ್ವಹಿಸುತ್ತ ಬಂದಿವೆ.

ಕನ್ನಡ ನಾಡಿನಲ್ಲಿ ವರಾಹ, ಗರುಡ, ಸಿಂಹ ಹೀಗೆ ವಿವಿಧ ಧ್ವಜದ ಲಾಂಛನ ಮಾಡಿಕೊಂಡು ಸಾಮ್ರಾಜ್ಯ ಸ್ಥಾಪನೆ ಮಾಡಿ ರಾಜಕೀಯ ಮಾಡುತ್ತ ಬಂದ ಕನ್ನಡ 'ಕುಲದ ಅರಸರ' ಬಗ್ಗೆ ಒಂದೆರಡು ಮಾತುಗಳು ದಾಖಲಿಸುವುದು ಬಹುಮುಖ್ಯವಾಗಿದೆ. ಕ್ರಿ.ಶ. ೨ನೆಯ ಶತಮಾನದಿಂದ ಈ ಸಮಸ್ತ ಕರ್ನಾಟಕ ಭೂಮಿಯನ್ನು ಆಳಿದವರು ಕನ್ನಡ ಕುಲದ ಶಾತವಾಹನರು. ಇವರು ಕನ್ನಡಿಗರೆಂದು ಹೇಳಲು ಅನೇಕ ಆಧಾರಗಳು ಸಿಗುತ್ತವೆ. ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಮತ್ತು ಮ್ಯಾಕೊಂಡಗಳಲ್ಲಿ ದೊರೆತ ಶಾಸನಗಳಿಂದ ಈ ಪ್ರಾಂತಕ್ಕೆ 'ಸಾತವಾಹನಿಹರ' ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಸಾತವಾಹನರಿಗೆ 'ಕುಂತಲಸ್ವಾಮಿ' ಎಂಬ ಬಿರುದು ಕೂಡ ಇತ್ತು. ಬಹುಶಃ ಕುಂತಲ ಮತ್ತು ಕರ್ನಾಟಕ ಇವೆರಡು ಸಮಾನಾರ್ಥವನ್ನು ಸೂಚಿಸುತ್ತದೆ.

ಬಾದಾಮಿಯ ಚಾಲುಕ್ಯರು ೬ನೆಯ ಶತಮಾನದಿಂದ ೮ನೆಯ ಶತಮಾನದವರೆಗೆ ಕರ್ನಾಟಕವನ್ನೊಳಗೊಂಡು ದಕ್ಷಿಣ ಹಿಂದೂ ದೇಶವನ್ನೆಲ್ಲ ಆಳಿದ ಅರಸರು. ಇವರ ರಾಜಧಾನಿ ಬಾದಾಮಿ ಒಂದು ಕಾಲದಲ್ಲಿ ಕರ್ನಾಟಕದ ಹೃದಯಸ್ಥಾನವಾಗಿತ್ತು. ಇವರ ಸೈನ್ಯಬಲದ ಪ್ರಖರತೆ ಹೇಗಿದ್ದಿತು ಎಂದರೆ "ಅನಂತಂ ಅಜೇಯಂ ಕರ್ನಾಟಕ ಬಲಂ" ಎಂದು ವಿಖ್ಯಾತಿ ಹೊಂದಿತ್ತು ಎಂಬುದನ್ನು ಈ ಶಾಸನ ಸಾಲುಗಳಿಂದಲೇ ಅರಿಯಬೇಕು. ಈ ಅರಸು ಮನೆತನದ ಎರಡನೆಯ ಪುಲಕೇಶಿಯ ಸೊಸೆಯು ತಾನು "ಕರ್ನಾಟಕ ರಾಜಪ್ರಿಯೆ" ಎಂದು ಬಹು ಹೆಮ್ಮೆಯಿಂದ ಹೇಳಿಕೊಂಡಿದ್ದರೆ, ಈ ಪುಲಕೇಶಿಯ ಸಹೋದರ ವಿಷ್ಣುವರ್ಧನನು ವೆಂಗಿ ದೇಶವೆಂದು ಕರೆಯುವ ತೆಲುಗುನಾಡನ್ನು ಆಳಿದ ಪೂರ್ವಚಾಲುಕ್ಯರ ಮೂಲ ಪುರುಷನೆಂದು ಶಾಸನ ತಿಳಿಸುತ್ತದೆ.

ಬಾದಾಮಿಯ ಚಾಲುಕ್ಯರ ನಂತರ ಆಳಿದ ರಾಷ್ಟ್ರಕೂಟ ಅರಸರು. ಇವರಿಗೆ 'ನಾಡವರು' ಎಂದು 'ರಟ್ಟರು', 'ರಾಷ್ಟ್ರೀಕ'ರೆಂದು ಕರೆಯುವ ವಾಡಿಕೆಯೂ ಇದೆ. ಕಾಶ್ಮೀರದ ಪ್ರಾಚೀನ ಇತಿಹಾಸವನ್ನು ತಿಳಿಸುವ 'ರಾಜತರಂಗಿಣಿ'ಯಲ್ಲಿ ರಟ್ಟರಿಗೆ 'ಕರ್ನಾಟಕ'ರೆಂದು ಕರೆದಿದೆ. ಇವರ ದಂಡು ಸಹ 'ಕರ್ನಾಟಕ ಸೈನ್ಯ'ವೆಂದು ಕರೆಯಲ್ಪಡುತ್ತಿತ್ತು. ರಾಷ್ಟ್ರಕೂಟ ಅರಸನಾದ ನೃಪತುಂಗನ (ಕ್ರಿ.ಶ.೮೧೫) ಕಾಲದಲ್ಲಿ ರಚಿತವಾದ 'ಕವಿರಾಜ ಮಾರ್ಗ'ದಲ್ಲಿ ಕನ್ನಡದ ಮತ್ತು ಕನ್ನಡಿಗರ ಕುರಿತು ಬಹುವಾಗಿ ವರ್ಣಿಸಲಾಗಿದೆ. ಈ ಕವಿರಾಜಮಾರ್ಗಕ್ಕೆ "ಕರ್ನಾಟಕದ ಮೊದಲ ರಾಷ್ಟ್ರಗೀತೆ" ಕೃತಿ ಎಂದು ಕರೆದರೆ ಅತಿಶಯೋಕ್ತಿ ಆಗಲಾರದು. ರಾಷ್ಟ್ರಕೂಟ ಅರಸರಲ್ಲಿ ಕ್ರಿ.ಶ.೯೪೦-೯೬೭ ರವರೆಗೆ ಆಳಿದ ಮೂರನೆಯ ಕೃಷ್ಣನು ವಿಂಧ್ಯಪರ್ವತದಿಂದ ರಾಮೇಶ್ವರದವರೆಗೆ ರಾಜ್ಯ ವಿಸ್ತರಿಸಿಕೊಂಡು ರಾಜ್ಯವಾಳಿದ ಮಹಾಸಾಮ್ರಾಟ ಅರಸ. ಇವನ ಕುರಿತ ತಿಳಿಕನ್ನಡದ ಒಂದು ಶಾಸನವು ಉತ್ತರ ಭಾರತದ 'ಜೂರಾ' ಎಂಬಲ್ಲಿ ದೊರೆತಿದೆ. ಈ ರಾಷ್ಟ್ರಕೂಟ ಶಾಖೆಯೊಂದು ಗುಜರಾತದಲ್ಲಿ ರಾಜ್ಯಭಾರ ಮಾಡುತ್ತಿತ್ತು. ಅಲ್ಲಿ ಅನೇಕ ತಾಮ್ರ ಶಾಸನಗಳನ್ನು ಬರೆಸಿದ್ದು ಕಂಡುಬರುತ್ತದೆ. ಇವರ ಕಾಲದಲ್ಲಿ ಕನ್ನಡಿಗರ ಕೀರ್ತಿ 'ಭಾರತ ವರ್ಷ'ದಲ್ಲಿ ಎಷ್ಟು ಉಜ್ವಲವಾಗಿದ್ದಿತು ಎಂಬುದಕ್ಕೆ ರಾಜಶೇಖರ ಎಂಬ ಸಂಸ್ಕೃತ ಕವಿ ಹೇಳಿದ ಈ ಕೆಳಗಿನ ಸಂಸ್ಕೃತ ಶ್ಲೋಕಗಳು ಪುರಾವೆಯನ್ನೊದಗಿಸುತ್ತವೆ.

'ಕರ್ನಾಟೋ ಯುದ್ಧತಂತ್ರೇ ಚತುರಮತಿಃ
ಸಮರಕರ್ಮಣಿ ನಿಸರ್ಗೋದ್ಭವಾಸಿನಃ ಕರ್ನಾಟಾಃ

ಅಖಂಡಿತ ಪುರುಷಾಕಾರಾಃ ಹಿ ಕರ್ಣಾಟಾಃ" ಎಂದು ಹೇಳಲಾಗಿದೆ. 'ರಾಷ್ಟ್ರಕೂಟರು ಕನ್ನಡಿ ಅರಸರ್" ಎಂದು ಶಾಸದಲ್ಲಿ ಹೊಗಳಲಾಗಿದೆ. ಕರ್ನಾಟಕದ ಚಾಲುಕ್ಯ ಮತ್ತು ರಾಷ್ಟ್ರಕೂಟರ ತರುವಾಯ(ಕ್ರಿ.ಶ.೯೭೩-೧೧೯೦) ಆಳಿದವರಲ್ಲಿ ನೂರ್ಮಡಿ ತೈಲಪನು ಕವಿ ರನ್ನನ ಆಶ್ರಯದಾತನು. ಚಾಳುಕ್ಯ ವಿಕ್ರಮನು ಬಿಲ್ಹಣನಿಂದು 'ಕರ್ನಾಟೇಂದು' ಎಂದು ಹೊಗಳಿಸಿ ಕೊಂಡಿದ್ದಾನೆ. ಈ ಅರಸರ ಕಾಲದಲ್ಲಿ ಮಹಾವಿಪ್ಲವವೊಂದು ಘಟಿಸಿ, ಸುಪ್ತವಾಗಿದ್ದ ಪ್ರಜಾಶಕ್ತಿಯನ್ನು ಪ್ರಬಲಗೊಳಿಸಿತು. ಇದರಿಂದ ಜೀವವೇ ಇಲ್ಲದೆ ಕುಳಿತು ಕೊಂಡಿದ್ದ ಲಿಂಗಾಯತ ಸಮಾಜವೊಂದು ಸಚೇತನಗೊಂಡಿತ್ತು. ಬಸವಣ್ಣನವರಿಂದ ಇದಕ್ಕೊಂದು ದಿವ್ಯಶಕ್ತಿ ಪ್ರಾಪ್ತವಾಗಿತ್ತು. ಬಸವಣ್ಣನವರು ಮಾಡಿದ ಮಹಾಕ್ರಾಂತಿಯ ಪರಿಣಾಮವಾಗಿ ಕನ್ನಡ ಸಾಹಿತ್ಯ ಹೊಸದೊಂದು ಮಾರ್ಗವನ್ನು ತೆರೆದುಕೊಂಡಿದ್ದರ ಕಾರಣವಾಗಿ ಮಾನವರ ಬಾಳಿನ ಅಂತರಂಗ, ಬಹಿರಂಗಗಳನ್ನು ತೊಳೆದು ಅದಕ್ಕೆ ಮೆರಗು ಕೊಟ್ಟು ಸತ್ಯ ಸೌಂದರ್ಯದ ದರ್ಶನವನ್ನು ಮಾಡಿಕೊಟ್ಟಿತು. ಈ ಕ್ರಾಂತಿಯ ಬೆಳಕು ಭರತಖಂಡದ ಮೂಲೆ ಮೂಲೆಗಳಲ್ಲಿ ವ್ಯಾಪಿಸಿತು. ನೂತನ ಸಾಹಿತ್ಯದ ಕಮ್ಮಟವಾಗಿದ್ದ ಕಲ್ಯಾಣವು ಭಾರತದ ಬಹುದೊಡ್ಡ ಜನಸಾಮಾನ್ಯರ ವಿಶ್ವವಿದ್ಯಾಲಯವಾಗಿತ್ತು.

ಕಲ್ಯಾಣ ಚಾಲುಕ್ಯರ ನಂತರ ಕನ್ನಡ ಸಾಮ್ರಾಜ್ಯವನ್ನು ಆಳಿದವರೆಂದರೆ ಹೊಯ್ಸಳರು. ಇವರ ಯುಗದಲ್ಲಿ ಕನ್ನಡಿಗರ ಜಾತಿಯ ಭಾವನೆಯು ಹೊಸ ಸ್ಫೂರ್ತಿಯನ್ನು ಪಡೆದು ಮುಂದೆ ವಿಖ್ಯಾತವಾದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಯಿತು. ತನ್ನ ಆತ್ಮವನ್ನು ಕಂಡುಕೊಂಡಿದ್ದ ಕನ್ನಡ ಕುಲವು ಅಜೇಯವಾದ ವಿಜಯನಗರದ ಪತಾಕೆಯನ್ನು ದಿಗಂತದಲ್ಲಿ ಮೆರೆಯಿತು. ಕನ್ನಡಿಗರಲ್ಲಿ ಕಂಡು ಬರುತ್ತಿದ್ದ ಉಜ್ವಲ ಸ್ಫೂರ್ತಿಯನ್ನು ಕೇಂದ್ರೀಕರಿಸಿ ಅದನ್ನು ಲೋಕ ಸಂಗ್ರಹದ ಕಾರ್ಯಕ್ಕೆ ಹೆಚ್ಚಿಸಿ ನಾವೆಲ್ಲರೂ ಕನ್ನಡಿಗರು ಎಂಬ ಭಾವನೆಯನ್ನು ಸಾಮ್ರಾಜ್ಯ ರೂಪದಲ್ಲಿ ಮೂರ್ತಿಮಂತವಾಗಿಸಿದ ಯಶಸ್ಸು ವಿದ್ಯಾರಣ್ಯರಿಗೆ ಸಲ್ಲಬೇಕು. ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದವರು, ಆಳಿದವರು ಪೂರ್ವ ಕರ್ನಾಟಕದ ಕಡುಗಲಿಗಳು. ಪರಸಂಸ್ಕೃತಿಯ ದಾಳಿಯಿಂದ ದಕ್ಷಿಣದೇಶವನ್ನು ರಕ್ಷಿಸಿದ ಯಶಸ್ಸು

ಈ ಕನ್ನಡ ಸಾಮ್ರಾಜ್ಯಕ್ಕೇನೇ ಸಲ್ಲುವುದು. ಇಂದಿಗೂ ಈ ದಕ್ಷಿಣಭಾಗದಲ್ಲಿ ಶಾಂತಿಯು ಉಳಿದಿದೆ ಎಂದರೆ ಈ ವಿಜಯನಗರದ ಅರಸರು ಕಾರಣವೆಂದು ಹೇಳಬಹುದು. ಇವರು ಕನ್ನಡ ಜನಾಂಗದ ಭಾಷೆ–ಸಾಹಿತ್ಯ–ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಲೇ ಬಂದರು. ಅದರಲ್ಲಿ ೬ನೆಯ ಶತಮಾನದಲ್ಲಿ ಉದಯವಾದ ಬಾದಾಮಿಯ ಚಾಲುಕ್ಯರು, ಎಂಟನೆಯ ಶತಮಾನದಲ್ಲಿ ಉದಯವಾದ ಮಾನ್ಯಖೇಟದ ರಾಷ್ಟ್ರಕೂಟ ಅರಸರು, ೧೦ ನೆಯ ಶತಮಾನದಲ್ಲಿ ಕಲ್ಯಾಣ ಚಾಳುಕ್ಯ ಮತ್ತು ೧೨ನೇ ಶತಮಾನದಲ್ಲಿ ಉದಯವಾದ ಹೊಯ್ಸಳ ಈ ಎಲ್ಲ ಅರಸು ಮನೆತನಗಳು ಬರೆಸಿದ ಶಾಸನಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಈ ಶಾಸನ ಸಾಹಿತ್ಯದಲ್ಲಿ ಹುದುಗಿದ ಪ್ರಾಕೃತ–ಸಂಸ್ಕೃತ–ಕನ್ನಡ ಸಾಹಿತ್ಯವಿದೆ. ಗದ್ಯಪದ್ಯಗಳಿಂದ ಕೂಡಿದ ಚಂಪೂಸಾಹಿತ್ಯ, ಖ್ಯಾತ ಕರ್ನಾಟಕ, ಕಂದ–ತ್ರಿಪದಿಗಳಿಂದ ಕೂಡಿದ ಕನ್ನಡ ಛಂದಸ್ಸು ಇದೆ.

ಇತಿಹಾಸ ಪೂರ್ವಕಾಲದಲ್ಲಿ ವಿಂಧ್ಯ, ಕಿಷ್ಕಿಂದೆ, ಶಬರ ಮುಂತಾಗಿ ಪೌರಾಣಿಕ ನೆಲೆಯಲ್ಲಿ ಕರೆದ ದೇಶಗಳ ವಿಚಾರಗಳಿವೆ. ಉತ್ತರದ ರಾಜ್ಯಗಳಾದ ಇಂದ್ರಪ್ರಸ್ಥ, ಕೋಸಲ ದೇಶಗಳ ಪ್ರಸ್ತಾಪವಿದೆ. ದಕ್ಷಿಣದ ರಾಜ್ಯಗಳಾದ ಪಂಚವಟಿ( ಈಗಿನ ಮಹಾರಾಷ್ಟ್ರದ ನಾಸಿಕ)ಕಿಷ್ಕಿಂದೆ, ಶಬರ ವಿರಾಟನಗರ ಎಂದು ಕರೆದಿರುವ ವಿಚಾಗಳಿವೆ. ಪ್ರಾಚೀನ ಕಾಲದಲ್ಲಿ ಇವುಗಳನ್ನು ಉತ್ತರಭಾರತದಲ್ಲಿ ಮಗಧ, ಅವಂತಿ, ಕಳಿಂಗ, ಆಂಧ್ರದೇಶಗಳೆಂದು ಕರೆದಿರುವ ಸಂಗತಿಗಳಿವೆ. ದಕ್ಷಿಣದಲ್ಲಿ ಕೊಡಗು ಬನವಾಸಿ, ಸುರ್ಣಗಿರಿ, ತುಳುನಾಡು, ಕುಂತಳ, ಸೇಂದ್ರಕ, ಪುನ್ನಾಟಗಂಥ ರಾಜ್ಯಗಳ ಪ್ರಸ್ತಾಪವಿದೆ. ಅಲ್ಲದೆ ಅನೇಕ ಶೀಮೆಗಳ ಬಹುದೊಡ್ಡ ಅಭ್ಯಾಸ ಮಾಡಬೇಕಿದೆ. ಸಗರ–೩೦೦, ಕರಡಿಕಲ್ಲ–೩೦೦, ಮೊರಟ–೩೦೦,ಬೆಳುಗಲಿ –೫೦೦, ಬೆಳ್ವಲ–೩೦೦, ಕೆಳವಾಡಿ–೩೦೦, ಆಳಿದ ರಾಜರ ಚರಿತ್ರೆ ಕಟ್ಟಬೇಕಿದೆ. ಸಾಮ್ರಾಜ್ಯದ ವಿಸ್ತಾರಕ್ಕಾಗಿ ನಡೆದ ರಾಜಕೀಯ ಹೋರಾಟ ಮತ್ತು ಅಧಿಕಾರ ವಿಕೇಂದ್ರಿಕರಣಗಳ ಭರದಲ್ಲಿ ವಿವಿಧ ನಾಡುಗಳ, ಗಡಿಗೆರೆಗಳ ಆಳ–ಅಗಲಗಳನ್ನು ವಿಸ್ತರಿಸಿಕೊಂಡು ಹೋದ ವಿಚಾರಗಳಿವೆ.

ಇದಲ್ಲದೇ ಕರ್ಣಾಟ, ಕರ್ನಾಟ ಈ ಶಬ್ದಗಳ ಹಲವು ಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿ ವಿಭಿನ್ನವಾಗಿ ಹೇಳಿದ್ದಾರೆ. ಇದೇ ರೀತಿಯಲ್ಲಿ ಮನೆನಾಡು, ನಡುವಣನಾಡು, ತಿರುಳ್ಗನ್ನಡ, ಬೆಳಗು ಗನ್ನಡಗಳ ಪ್ರಸ್ತಾಪಗಳಿವೆ. ಅವುಗಳ ಕುರಿತು ವಿವರಣೆ ಅಗತ್ಯವೆಂದು ಭಾವಿಸಿದ್ದೇನೆ. ಮೊದಲಿಗೆ ಕರ್ಣಾಟ, ಕರ್ನಾಟ ಯಾವುದು ಸರಿ ಎಂಬುದನ್ನು ವಿವೇಚಿಸುವುದು ಅಗತ್ಯವಿದೆ. ಕರ್ಣಾಟ–ಕರ್ನಾಟ ಈ ಎರಡು ಶಬ್ದಗಳ ರೂಪ ನಿಷ್ಪತ್ತಿಯನ್ನು ಕುರಿತು ಸಂಸ್ಕೃತ ಪಂಡಿತರು 'ಕರ್ಣಾಟ' ಎಂಬುದು ಸಂಸ್ಕೃತ ಪದವಾಗಿದ್ದು ಇದರಿಂದ ಅಪಭ್ರಂಶವಾಗಿ ಕನ್ನಡ ಪದ ಹುಟ್ಟಿದೆ ಎಂದು ಹೇಳುತ್ತಾರೆ.

**ಮನೆನಾಡುತತ್ವ**

ಮನೆನಾಡು ತತ್ವದ ಕುರಿತು ವಿವೇಚಿಸುವುದಾದರೆ ಐತಿಹಾಸಿಕವಾಗಿ ಕನ್ನಡಿಗರ ಪ್ರಾಚೀನ ಪರಂಪರೆಯನ್ನು ಭೌಗೋಲಿಕವಾಗಿ ಗುರುತಿಸುವುದು ಮುಖ್ಯವಾಗಿದೆ. ನಾವು ಶಾಸನಗಳನ್ನು ಅಧ್ಯಯನ ಮಾಡುತ್ತ ಹೋದಾಗ ಯಾವುದೋ ಒಂದು ವಿಶಿಷ್ಟ ಸಂಸ್ಕೃತಿಗೆ ಒಳಪಟ್ಟಿರುವ ಸಂಗತಿಗಳು ಅಲ್ಲದೆ ಆ ಜನಾಂಗವು ತನ್ನದೇ ಆದ ಹಲ ಕೆಲವು ವಾಸ್ತವಿಕತೆಯಿಂದ ಕೂಡಿದ ಮೇರೆಗಳು ಭೂಭಾಗಗಳನ್ನು ಆವರಿಸಿಕೊಂಡಿರುವದು ಕಂಡು ಬರುತ್ತದೆ. ನಮ್ಮ ಪೂರ್ವಿಕರು ವಾಸವಾಗಿದ್ದ ಪರಂಪರೆಯ ಪ್ರದೇಶಗಳೇ ಆ ಜನಾಂಗದ 'ಮನೆನಾಡಾ'ಗಿರಬೇಕು. ಅಥವಾ 'ನೆಲೆವೀಡಾ'ಗಿರಬೇಕು; ಕಾಲ ಕಳೆದಂತೆ ಆ ನೆಲೆವೀಡಿನಲ್ಲಿ ಇತರರು ಪ್ರವೇಶಿಸಿ ವಾಸಿಸಿರಬಹುದು. ಹೀಗೆ ಅನೇಕ ಕಾರಣಗಳು ಉಂಟಾಗಿ ರಾಜರಾಜರ ಮಧ್ಯೆ ಕಲಹಗಳು ಉದ್ಭವಿಸಿ ಆ ನಾಡಿನ ಭಾಗಗಳು ಪರರ ಆಕ್ರಮಣಕ್ಕೆ ಒಳಗಾಗಿರಬಹುದು. ಅಥವಾ ಆ ನಾಡಿನವರೇ ಇತರ ಪ್ರಾಂತಗಳನ್ನು ಜಯಿಸಿ ಅಲ್ಲಿ ನೆಲೆ ಊರಿರಬಹುದು. ಒಂದು ನಾಡಿನವರು ನೆರೆನಾಡುಗಳನ್ನು ಆಕ್ರಮಿಸಿಕೊಂಡು ನೆಲೆಸಿದ್ದ ಮಾತ್ರಕ್ಕೆ ಅವು 'ಆಕ್ರಮಣದ ನಾಡು', ಅವರ 'ಮನೆನಾಡು' ಎಂದಿಗೂ ಆಗಲಾರದು. ಹೀಗಾದ ಆಕ್ರಮಣದ ಕಾರಣದಿಂದಾಗಿ ವಿವಿಧ ಭಾಷೆಗಳನ್ನಾಡುವ ಜನರು ಮಿಶ್ರಣವಾಗಿ ಒಂದೊಂದು ಗ್ರಾಮಗಳಲ್ಲಿ ಹಾಗೂ ಒಂದೊಂದು ಪ್ರದೇಶಗಳಲ್ಲಿ ಉಂಟಾಗುವುದು ಸಹಜವೇ ಆಗಿದೆ.

ಹೀಗಿದ್ದಾಗ ಇಲ್ಲಿ ಒಂದು ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಅದೇನೆಂದರೆ; ಕನ್ನಡಿಗರಲ್ಲಿ ಜಾತಿಯ ಐಕ್ಯತೆ ಇದೆಯೇ? ಅವರದೇ ಆದ ಚರಿತ್ರೆಯ ಪರಂಪರೆ ಇದೇಯೇ? ಅವರಿಗೆ ವಿಶಿಷ್ಟವಾದ ಸಂಸ್ಕೃತಿ ಮತ್ತು ಸಾಹಿತ್ಯಗಳಿವೆಯೇ? ಅವರು ವಾಸಿಸುವ ಭಾಗಗಳು ಸಲ್ಲಗ್ನವಾಗಿದೆಯೇ? ಈ ಮುಂತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ಕಂಡುಕೊಳ್ಳಬೇಕಾಗಿದೆ. ಆಗ ಕನ್ನಡಿಗರ ತೊಟ್ಟಿಲುನಾಡು ಯಾವುದೆಂಬುದು ಸುಲಭವಾಗಿ ಗುರುತಿಸಲು ಕಡ್ಡಾಯವಾಗಿ ಶಾಸನ ಅಧ್ಯಯನ ಮಾಡಲೇಬೇಕಾಗುತ್ತದೆ. ಈಗ ಕರ್ನಾಟಕದ ಮೇರೆಗಳ ಮತ್ತು ನಾಡುಗಳ ಕುರಿತು ಈ ಕೆಳಗಿನಂತೆ ನೋಡಬಹುದು.

**ಕರ್ನಾಟಕದ ಮೇರೆ ಮತ್ತು ನಾಡುಗಳ ಅವಲೋಕನ**

ಕವಿರಾಜಮಾರ್ಗಕಾರ ಸೂಚಿಸಿರುವ ಕರ್ನಾಟಕದ ಮೇರೆಗಳ ಕುರಿತ ವಿವೇಚಿಸುವುದಾದರೆ ಅದು ಈ ಮುಂದಿನಂತಿದೆ. 'ಉತ್ತರದಲ್ಲಿ ಗೋದಾವರಿ' ದಕ್ಷಿಣದಲ್ಲಿ ಕಾವೇರಿ ಎಂಬ 'ರಿ' ಅಕ್ಷರದ ಮೂಲಕ ಅಂತ್ಯಪ್ರಾಸ ಹೊಂದುವ ಎರಡು ನದಿಗಳು ಕವಿರಾಜಮಾರ್ಗದ ಕಂದ ಪದ್ಯದ ಆದಿಪ್ರಾಸಕ್ಕೆ ಒಂದು ರೀತಿಯಿಂದ ಹೊಂದಿಕೊಂಡಿದೆ. ಕವಿರಾಜಮಾರ್ಗಕಾರ ಪ್ರಾಚೀನ ಕರ್ನಾಟಕದ ವಿಸ್ತಾರವನ್ನು 'ಕಾವೇರಿಯಿಂದಮಾ ಗೋದಾವರಿವರಮಿರ್ದಾನಾಡು' ಎಂದು ಹೇಳಿರುವುದನ್ನು ಇಂದು ಕನ್ನಡಿಗರಾದ ನಾವೆಲ್ಲಾ ಕೇವಲ ಓದಿ ಹೆಮ್ಮೆಪಡುವುದಾಗಿದೆ. ಹೀಗೆ ಪಶ್ಚಿಮದಲ್ಲಿ ಕಾವೇರಿ, ಉತ್ತರದಲ್ಲಿ–ನರ್ಮದಾತೀರ, ತಮಿಳಿನ ಭಾಗದಲ್ಲಿ ಕಾಂಚಿವರೆಗೆ ಹಬ್ಬಿ ನಿಂತಿರುವ ಕರ್ಣಾಟಕ ಅಥವಾ ಭಾಷೆ ಕನ್ನಡದ ಭೌಗೋಲಿಕತೆಯನ್ನು ಸಾರುವ ಅನೇಕ ಐತಿಹಾಸಿಕ ಸತ್ಯಗಳನ್ನು ತಿಳಿಸುವ ಮೇರೆಗಳ ಪ್ರಸ್ತಾಪಗಳಿವೆ. 'ಗೋದಾವರಿ' ಇಂದು ಕರ್ನಾಟಕದ ಸೀಮೆಯಾಗಿ ಉಳಿದಿಲ್ಲ. ಈಗಾಗಲೇ ಗೋದಾವರಿಯಿಂದ ಭೀಮಾತೀರದ ವರೆಗಿನ ಬಹು ವಿಶಾಲ ಮತ್ತು ಫಲವತ್ತಾದ ಪ್ರದೇಶವನ್ನು ಕೈಚೆಲ್ಲಿ ಕುಳಿತ್ತಿದ್ದೇವೆ ಅಂದರೆ ಕಳೆದುಕೊಂಡಿದ್ದೇವೆ ಎಂದರ್ಥ. ದಕ್ಷಿಣದ ಕಾವೇರಿಯ ಆಚೆಗೂ ನಮ್ಮ ಕನ್ನಡ ಪ್ರದೇಶ ಹಬ್ಬಿತ್ತು. ರಾಷ್ಟ್ರಕೂಟರ ಆಳ್ವಿಕೆಯ ಸಮಕಾಲೀನರಾಗಿ ದಕ್ಷಿಣದಲ್ಲಿ ಆಳುತ್ತಿದ್ದ ಗಂಗ ಅರಸರು ಕನ್ನಡಿಗರಾಗಿದ್ದರು. ಅವರನ್ನು ಬಿಟ್ಟು ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಮಿತಿಗೊಳಿಸಿದ್ದರಿಂದ ಕವಿರಾಜಮಾರ್ಗದಲ್ಲಿ ಕಾವೇರಿ ದಕ್ಷಿಣ ಸೀಮೆಯಾಗಿ ಉಳಿದಿದೆ ಅಷ್ಟೇ.

**ತಿರುಳ್ಗನ್ನಡದ ನಡುವಣ ನಾಡು**

ತುಂಗ ಮತ್ತು ಕೃಷ್ಣನದಿಗಳ ಮಧ್ಯದಲ್ಲಿರುವ ನಾಡುಗಳು ಕಾಂಚೀಪುರವರಾಧೀಶ್ವರರಾದ ಪಲ್ಲವರಾಜರ ಕೈಕೆಳಗೆ ಕ್ರಿ.ಶ ಸುಮಾರು ೫ನೆಯ ಶತಮಾನದವರೆಗೂ ಇದ್ದವು. ಆ ಕಾಲದಲ್ಲಿ ಈ ಪ್ರದೇಶ ತಮಿಳಿಗರ ಪ್ರಾಬಲ್ಯದಲ್ಲಿತ್ತು ಎಂಬುದಕ್ಕೆ ಗಂಗವಾಡಿಯ ಶಾಸನಗಳನ್ನು ಗಮನಿಸಿದರೆ ಇದು ತಿಳಿದು ಬರುತ್ತದೆ. ಬಳಿಕ ಕೆಲವು ಕಾಲದವರೆಗೆ ಮೈಸೂರಿನವರಾದ ಕದಂಬರಾಜರ

ಕೈವಶವಾಯಿತು. ಕದಂಬ ಅರಸರ ಇಳಿಮುಖವಾಗುತ್ತಲೇ ಕ್ರಿ.ಶ. ಸುಮಾರು ೭ನೆಯ ಶತಮಾನದ ಆದಿಭಾಗದಲ್ಲಿ ಚಾಳುಕ್ಯರಾಜರ ಕೈ ಸೇರಿತು. ಚಾಳುಕ್ಯರ ರಾಜರಲ್ಲಿ ಇಮ್ಮಡಿ ಪುಲಕೇಶಿ ಸತ್ಯಾಶ್ರಯ ಮಹಾರಾಜನು (೬೦೯-೬೪೨) ಕದಂಬರಾಜರನ್ನು ಗೆದ್ದು ಈ ನಾಡುಗಳನ್ನು ತನ್ನ ಸ್ವಾಧೀನ ಪಡಿಸಿಕೊಂಡನು. ಚಾಳುಕ್ಯರಾಜರ ರಾಜ್ಯಗಳಲ್ಲಿ ಮಹಾರಾಷ್ಟ್ರವೂ, ಕನ್ನಡನಾಡುಗಳು, ಕೆಲವು ತೆಲಗು ನಾಡುಗಳು ಸೇರಿದ್ದವು. ಚಾಳುಕ್ಯರ ಪ್ರಾಬಲ್ಯವು ಕ್ರಿ.ಶ. ೮ನೆಯ ಶತಮಾನದ ಮಧ್ಯದವರೆಗೂ ಇತ್ತು. ಇಮ್ಮಡಿ ವಿಕ್ರಮಾದಿತ್ಯ (ಕ್ರಿ.ಶ.೭೩೩-೭೪೬) ಕಂಚಿಯನ್ನು ಗೆದ್ದು ಪ್ರಸಿದ್ಧಿ ಪಡೆದನು. ಬಳಿಕ ರಾಷ್ಟ್ರಕೂಟರ ಪ್ರಾಬಲ್ಯ ಆರಂಭವಾಯಿತು. ಈ ರಾಜರುಗಳಲ್ಲಿ ನೃಪತುಂಗನು(೮೧೫-೮೭೭) ಸುಪ್ರಸಿದ್ಧನಾದನು. ಈತನಿಗೆ 'ಅತಿಶಯಧವಳ' ಎಂಬ ಹೆಸರು ಇತ್ತು. ಈತನೇ ಕವಿರಾಜಮಾರ್ಗ ಬರೆದನೆಂದು ಪ್ರತೀತಿಯಿದೆ. ಆದರೆ ಕಲಬುರ್ಗಿಯವರು ತಮ್ಮ ಪ್ರಬಂಧದ ಮೂಲಕ ನೃಪತುಂಗ ಬರೆದಿಲ್ಲ. ಶ್ರೀವಿಜಯನೇ ಕವಿರಾಜಮಾರ್ಗ ಬರೆದಿದ್ದಾನೆ ಎಂದು ಅನೇಕ ಆಕರಗಳ ಮೂಲಕ ಸಾಭಿತು ಪಡಿಸಿರುವುದನ್ನು ತಿಳಿದ ವಿಷಯವಾಗಿದೆ.

"ಕಾವೇರಿಯಿಂದಮಾ ಗೋ
ದಾವರಿವರಮಿರ್ದನಾಡದಾ ಕನ್ನಡದೋಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ

ಅದರೊಳಗಂ ಕಿಸುವೊಳಲ್
ವಿದಿತ ಮಹಾಕೊಪಣ ನಗರದಾ ಪುಲಿಗೆರೆಯಾ
ಸದಭಿಸ್ತುತಮಪ್ಪೊಕುಂ।

ದದ ನಡುವಣ ನಾಡೆ ಕನ್ನಡದ ತಿರುಳ್"[೨] ಎಂದು ಹೇಳುತ್ತಾನೆ. ನೃಪತುಂಗ ಕ್ರಿ.ಶ. ೯ನೆಯ ಶತಮಾನದಲ್ಲಿ(ಕ್ರಿ.ಶ.೮೧೫-೮೭೭) ಬಾಳಿದನೆಂದು (ಇತಿಹಾಸ ಮತ್ತು ಕನ್ನಡ ಕಾವ್ಯಪತ್ಯಗಳೇ ತಿಳಿಸುತ್ತವೆ.) ಈ ಸಾಸಿರ ವರ್ಷಗಳ ಹಿಂದೆ ಇದ್ದ ವಿದ್ಯಮಾನಗಳನ್ನು ಇವನು ವರ್ಣಿಸುತ್ತಾನೆ. ಕಾವೇರಿ ಮತ್ತು ಗೋದಾವರಿ ನದಿಗಳ ಮಧ್ಯದಲ್ಲಿ ತುಂಗಾ, ಕೃಷ್ಣಾ ನದಿಗಳು ಹರಿಯುತ್ತವೆ. ಕಾವ್ಯದಲ್ಲಿ ಉಕ್ತವಾಗಿರುವ ಕನ್ನಡ ನಾಡುಗಳಲ್ಲಿ ನಡುವಣ ನಾಡಾಗಿತ್ತು ಎಂದು ವರ್ಣಿಸಿರುವ ಭಾಗವು ಹೆಚ್ಚು ಕಡಿಮೆ ತುಂಗಾನದಿ ಮತ್ತು ಕೃಷ್ಣಾನದಿಗಳ ಮಧ್ಯದಲ್ಲಿರುವುದು. ಏನಿದ್ದರೂ ವಿಸ್ತಾರವಾದ ಕನ್ನಡ ಪ್ರದೇಶದಲ್ಲಿ ತಿರುಳ್ಗನ್ನಡದ ನಡುವಣ ನಾಡನ್ನು ಕವಿರಾಜಮಾರ್ಗಕಾರ ಒತ್ತು ಕೊಟ್ಟು ಹೇಳಿರುವನು.

ಅವನ ವಿಚಾರದಲ್ಲಿ ಕಿಸುವೊಳಲು ಎಂಬುದು ಕೃಷ್ಣಾನದಿಯ ಹತ್ತಿರ (ವಿಜಾಪೂರ ಪ್ರಾಂತದಲ್ಲಿಯ) ಈಗಿನ ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕಿನ ಪಟ್ಟದಕಲ್ಲು ಎಂಬುದರ ಬಳಿ ಇತ್ತು. ಕೊಪಣನಗರ ಎಂಬುದು ಈಗ ಕೊಪ್ಪಳೆಂಬ ಹೆಸರಿನಲ್ಲಿ ಬಳ್ಳಾರಿ ಮತ್ತು ಗದಗಿನ ಮಧ್ಯದಲ್ಲಿದೆ. ಪುರಿಗೆರೆ ಎಂಬುದು ಪ್ರಾಚೀನ ಕಾಲದಲ್ಲಿ ಧಾವಾಡದ ಪ್ರಾಂತದಲ್ಲಿತ್ತು. ಈಗ ಗದಗ ಜಿಲ್ಲೆಯ ಲಕ್ಷ್ಮೇಶ್ವರವಾಗಿದೆ. ಇದು ಒಂದು ಕಾಲಕ್ಕೆ ಮೀರಜ ಸಂಸ್ಥಾನಕ್ಕೆ ಒಳಪಟ್ಟಿತ್ತು. ಒಕುಂದ ಅಥವಾ ಒಕ್ಕುಂದ ಎಂಬುದು ಬೆಳಗಾವಿ ಪ್ರಾಂತಿನಲ್ಲಿದೆ.(ಇದು ಈಗ ಮಲಪ್ರಭಾ ನದಿಯಲ್ಲಿ ಮುಳುಗಿ ಹೋಗಿ ಒಂದೆ ಒಂದು ಗುಡ್ಡ ಇರುವುದರಿಂದ ಒಕ್ಕ ಅಂದರೆ= ಒಂದು, ಕುಂದ>ಗುಡ್ಡ =ಒಕ್ಕುಂದ ಎಂದಾಗಿದೆ). ಕ್ರಿ.ಶ. ೯೪೧ರಲ್ಲಿ ಬಾಳಿದ ಪಂಪನು ಪುಲಿಗೆರೆಯ ತಿರುಳಗನ್ನಡದಲ್ಲಿ ತನ್ನ ಗ್ರಂಥಗಳಾದ ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ ಬರೆದನು. ಕನ್ನಡದ ತಿರುಳು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವೆ ಇತ್ತು ಎಂದೂ ಸ್ಥೂಲವಾಗಿ ಹೇಳಬಹುದು. ಇದು ಮೇರೆಗಳ ಸಂಕ್ಷಿಪ್ತ ಇತಿಹಾಸವಾದರೆ ನಡುವಣ ನಾಡಿನ ಕುರಿತು ನಿರ್ವಚಿಸುವುದು ಅಗತ್ಯವಿದೆ.

## ನಡುವಣನಾಡು

ಕವಿರಾಜ ಮಾರ್ಗಕಾರ ಹೇಳಿದ ನಡುವಣ ನಾಡಿನ ಕನ್ನಡ ಹೇಗಿತ್ತು ಎಂಬುದನ್ನು ನೋಡುವುದು ಬಹು ಮುಖ್ಯವೆಂದು ಭಾವಿಸುತ್ತೇನೆ. ಗಂಗವಾಡಿಯಲ್ಲಿ ತಮಿಳಿನ ಪ್ರಾಬಲ್ಯವಿದ್ದಂತೆ ಈ ನಡುವಣ ನಾಡಿನಲ್ಲಿ ಮಹಾರಾಷ್ಟ್ರೀ ಪ್ರಾಕೃತದ ಪ್ರಭಾವ ಹೆಚ್ಚಾಗಿತ್ತು. ಈ ಕಾರಣದಿಂದ ವರ್ಣಮಾಲೆಯ ಅಕ್ಷರಗಳ ಉಚ್ಚಾರಣೆಯು ಪ್ರಾಕೃತದಲ್ಲಿದ್ದಂತೆ ಕನ್ನಡಕ್ಕೂ ಬಂದಿತು. ಇದು ಕನ್ನಡಕ್ಕೆ ಮಹೋಪಕಾರವಾಯಿತು. ತಮಿಳಲ್ಲಿ 'ಗ'ಕಾರೋಚ್ಚಾರಣೆಯು 'ಹ'ಕಾರದಂತಿತ್ತೆ ವಿನಹ ನಡುವಣನಾಡಿನ ಕನ್ನಡದಲ್ಲಿ ಹಾಗಿರಲಿಲ್ಲ. ಕನ್ನಡವು ದ್ರಾವಿಡ ಭಾಷಾವರ್ಗಕ್ಕೆ ಸೇರಿರುವುದನ್ನು ಪರಿಶೀಲಿಸುವಲ್ಲಿ ಸಹಜವಾಗಿ ಕನ್ನಡದಲ್ಲಿ 'ಸ'ಕಾರ 'ಚ'ಕಾರ ವಿವಕ್ಷೆಯು ಇರಲಿಲ್ಲವೆಂದು ತಿಳಿದು ಬರುತ್ತದೆ. ತಮಿಳನಲ್ಲಿಯೂ ದೇಶೀಯ ಪದಗಳಲ್ಲಿ ಮಹಾಪ್ರಾಣಾಕ್ಷರಗಳು ಕಾಣಬರುವುದೇ ಇಲ್ಲ. ಮಹಾರಾಷ್ಟ್ರೀ, ಪ್ರಾಕೃತದ ಸಂಬಂಧದಿಂದ ಮಹಾಪ್ರಾಣಾಕ್ಷರಗಳು ಕನ್ನಡಕ್ಕೆ ಬಂದು ಸೇರಿದುವು. ಬಹುಶ: ಈ ಕಾರಣದಿಂದಲೇ ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ-

"ಒಳವು ಮಹಾಪ್ರಾಣಂಗಳ್
ವಿಳಸತ್ಕರ್ಣಾಟಕ ಭಾಷೆಯೊಳ್ ಕೆಲವು ನಿಜೋ
ಜ್ವಳಮಾಗಿ...."[೩]ಎಂದು ಹೇಳಿದ್ದಾನೆ.

ಕೇಶಿರಾಜ ಹೇಳುವ ಮಹಾಪ್ರಾಣಾಕ್ಷರದ ಪದಗಳೆಲ್ಲವೂ ಪ್ರಾಕೃತಪದಗಳಾಗಿವೆ[೪]ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ನಡುವಣನಾಡಿನಲ್ಲಿ ಬರೆಯುತ್ತಿದ್ದ ಠಾಣ, ಢಂಕೆ, ಧನಿ, ಭಂಗಾರ ಮುಂತಾದ ಪದಗಳು ಗಂಗವಾಡಿಯಲ್ಲಿ ಅಲ್ಪಪ್ರಾಣದೊಡನೆ ತಾಣ, ಡಂಕೆ, ದನಿ, ಬಂಗಾರವೆಂದು ಉಚ್ಚರಿಸಲ್ಪಡುತ್ತಿದ್ದವು.

ನಡುವಣನಾಡಿನಲ್ಲಿ ವರ್ಗತೃತೀಯಾಕ್ಷರಗಳ ಪ್ರಯೋಗದ ಪ್ರಾಕೃತದಿಂದಲೂ ತೆಲುಗಿನ ಪ್ರಭಾವದಿಂದಲೂ ಚೆನ್ನಾಗಿ ಬಳಕೆಯಾಗಿದ್ದರಿಂದ ತಮಿಳಿನ ಪದೋಚ್ಚಾರಣೆ ಅವಶ್ಯವಾಗಲಿಲ್ಲ. ವರ್ಗತೃತೀಯಾಕ್ಷರಗಳ ದ್ವಿರ್ಭಾವವು ಪ್ರಾಕೃತ ತೆಲುಗುಗಳ ಪ್ರಚಾರದಿಂದ ನಡುವಣನಾಡಿನಲ್ಲಿ ಬಳಕೆಯಾಯಿತು. ತಮಿಳಿನ ಪ್ರಭಾವದಿಂದ ಗಂಗವಾಡಿಯಲ್ಲಿ ಒಕುಂದ ಎಂಬ ಹೆಸರನ್ನು ಒಕ್ಕುಂದ ಎಂದು ಮಾಡಿಕೊಂಡಿದ್ದರು. ಗಂಗವಾಡಿಯ ತಲೆಕಾಡು, ಎಡತ್ತೊರೆ ಪೋಪ್ಪಂದು ಮುಂತಾದ ಪದಗಳು ನಡುವಣನಾಡಿನಲ್ಲಿ ವರ್ಗಪ್ರಥಮದ ದ್ವಿಭಾವವಿಲ್ಲದೆ ತಲಕಾಡು, ಎಡತ್ತೊರೆ, ಪೋಪ್ಪಂದು ಎಂದು ಉಚ್ಚರಿಸಲ್ಪಡುತ್ತಿದ್ದವು. ನಡುವಣನಾಡಿನ ವಿದ್ವಾಂಸರು ಗಂಗವಾಡಿಯ ಕನ್ನಡವನ್ನು ನಿರಾಕರಿಸದೇ ದಕ್ಷಿಣಮಾರ್ಗದ ಕನ್ನಡವೆಂದು ಸ್ವೀಕರಿಸಿದರು. ಡಾ.ಆರ್. ಜಿ. ಭಂಡಾರಕರ ಅವರು ಬರೆದಿರುವ ದಖ್ಖನ ಅಥವಾ ಮಹಾರಾಷ್ಟ್ರದ ಚರಿತ್ರೆಯನ್ನು ಅಧ್ಯಯನ ಮಾಡಿದಾಗ "ಕ್ರಿ.ಶ.ಪೂ ೭ನೆಯ ಶತಮಾನದಲ್ಲಿ ಆಳಿದ ಪಾಣಿನೀಯ ಕಾಲದಲ್ಲಿ ದ್ರಾವಿಡ ಭಾಷೆಯಲ್ಲಿ ಸೊಲ್ಲೆ ಮಹಾರಾಷ್ಟ್ರದಲ್ಲಿರಲಿಲ್ಲವೆಂದು, ಕ್ರಿ.ಶ.ಪೂ ನಾಲ್ಕನೆಯ ಶತಮಾದಲ್ಲಿ ಬಾಳಿದ ಕಾತ್ಯಾಯನನ ಕಾಲದಲ್ಲಿ ದ್ರಾವಿಡ ಭಾಷೆಗಳ ಹೆಸರುಗಳು ಆರ್ಯರಿಗೆ ತಿಳಿದಿದ್ದುವೆಂದು, ಕ್ರಿ.ಪೂ.

೨ನೆಯ ಶತಮಾದಲ್ಲಿ ಬಾಳಿದ ಪತಂಜಲಿಯ ಕಾಲಕ್ಕೆ ಭಾಷೆಗಳ ಹೆಸರುಗಳು ಆರ್ಯರಿಗೆ ಚೆನ್ನಾಗಿ ತಿಳಿದು ಬಂದಿತು ಎಂದು ಗೊತ್ತಾಗುತ್ತದೆ. ನಡುವಣನಾಡಿನ ಜನರಿಗೆ ಸಂಸ್ಕೃತ ಪ್ರಾಕೃತಗಳ ಪರಿಚಯವು ಪುರಾತನ ಕಾಲದಿಂದಲೂ ಇತ್ತೆನ್ನುವುದಕ್ಕೆ ಸಂದೇಹ ಪಡಬೇಕಾಗಿಲ್ಲ”[೫] ಎಂದು ಅಭಿಪ್ರಾಯಿಸಿದ್ದಾರೆ.

ಹೀಗಾಗಿ ನಡುವಣ ನಾಡಿನ ಕನ್ನಡ ತಿರುಳ್ಗನ್ನಡವಾಗಿದ್ದರಿಂದ ಕನ್ನಡದ ಲಕ್ಷಣ ಗ್ರಂಥಗಳು ಮೊದಲು ಈ ನಾಡಿನಲ್ಲಿ ಹುಟ್ಟುವುದು ಸಹಜವಾಗಿಯೇ ಇದೆ. ನೃಪತುಂಗನ ಕವಿರಾಜಮಾರ್ಗಕ್ಕಿಂತಲೂ ಹಳೆಯದಾದ ಗ್ರಂಥ ನಮಗೆ ಉಪಲಬ್ದವಾಗಿಲ್ಲ. ನಡುವಣ ನಾಡಿನ ತಿರುಳಗನ್ನಡ ಹೇಗಿತ್ತು ಎಂಬುದನ್ನು ಕವಿರಾಜ ಮಾರ್ಗ[೬]ದಿಂದಲೂ ಆದಿ ಕವಿ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯದ ಕೆಲವು ಪದ್ಯಗಳನ್ನು ಗಮನಿಸಬಹುದಾಗಿದೆ. ಹೀಗೆ ಕರ್ನಾಟಕದೊಳಗೆ ‘ತಿರುಳ್ಗನ್ನಡನಾಡು’, ತೆಂಕಣನಾಡು, ಬಡಗನಾಡುಗಳಂಥ ಕನ್ನಡದಲ್ಲಿ ನಾಲ್ಕು ಕವಲುಗಳಿದ್ದಂತೆ ತೋರುತ್ತದೆ. ಈ ನಾಲ್ಕು ನಾಡುಗಳ ‘ಒಳಮ್ಮೆನಾಡೇ’ ‘ತಿರುಳ್ಗನ್ನಡ ನಾಡು’ ಎಂಬುದು ಕವಿರಾಜಮಾರ್ಗಕಾರನ ಅಭಿಮತ.

ಆದಿಕವಿ ಪಂಪನು ವಿಕ್ರಮಾರ್ಜುನ ವಿಜಯದಲ್ಲಿ ‘ರಾಜದ್ರಾಜಕಮೆನಿಸಿದ ಸಾಜದ ಪುಲಿಗೆರೆಯ ತಿರುಳ್ಗನ್ನಡದೊಳ್’[೭] ಎಂದಿರುವ ಮಾತು ಈ ತಿರುಳ್ಗನ್ನಡ ನಾಡಿನ ಭಾಷೆಯ ವಿಶೇಷತೆಯನ್ನು ಸೂಚಿಸುತ್ತದೆ. ಪಂಪನನ್ನು ವಿದ್ವಾಂಸರು ಪುಲಿಗೆರೆಯವನೆಂದು ನಂಬಲಿ, ನಂಬದಿರಲಿ ಆತನ ವಾಣಿಯಲ್ಲಿ ಪುಲಿಗೆರೆ ಅನೇಕ ಸಂದರ್ಭಗಳಲ್ಲಿ ಎಡೆ ಪಡೆದಿದೆ. ಪುಲಿಗೆರೆಯ ‘ಸಾಜದ’ ದೇಸೀ ನಿಷ್ಠವಾದ ಅಂದಿನ ಅಧಿಕೃತ ಕನ್ನಡ Standard ಕನ್ನಡ. ಇದರಿಂದ ಕವಿ ಆ ನಾಡಿನವನೇ ಅಥವಾ ಹತ್ತಿರದವನೇ, ಆ ಊರಿನವನೇ ಆಗಿದ್ದಾನೆ. “ರಾಜಸುಧಾನಿಯ ಪುಟವಹ ಸಾಜದ ಪುಲಿಗೆರೆಯ”[೮] ಎಂಬಲ್ಲಿ ‘ರಾಜಸುಧಾನಿ’ ಪದ ಪ್ರಯೋಗ ತನಗೆ ಆಶ್ರಯ ನೀಡಿದ ದೊರೆ ಎರಡನೆಯ ಅರಿಕೇಸರಿಯ ರಾಜಧಾನಿಯಾಗಿರಬೇಕು. ಹೀಗಾಗಿ ಪಂಪ ಅಲ್ಲಿ ಕೆಲ ಕಾಲ ನಿಂತಿರಬೇಕು. ಇದರಿಂದ ಕವಿರಾಜ ಮಾರ್ಗಕಾರನ ‘ಪಳಗನ್ನಡ’, ನಯಸೇನನ ‘ಪೊಸಗನ್ನಡ’, ಆಂಡಯ್ಯನ ‘ಅಚ್ಚಗನ್ನಡ’, ನಿಜಗುಣನ ‘ಬೆಳಗು ಗನ್ನಡ’ ಯಾವುದು ಅಲ್ಲ. ಶ್ರೀ ಅವರ ಭಾಷೆಯಲ್ಲಿ ಅದನ್ನು ‘ಜೀವಗನ್ನಡ’ ಎಂದು ಹೇಳಬಹುದು. ಪಂಪನ ಈ ಮಾತಿಗೆ ಸಮರ್ಥಿಸಿದ ರನ್ನ ಕವಿಯೂ ತನ್ನ ‘ಸಾಹಸಭೀಮ ವಿಜಯದಲ್ಲಿ’ “ಕನ್ನಡಮೆರಡು ನೂರರ ಕನ್ನಡಮಾ ತಿರುಳ್ಗನ್ನಡ” ಎಂದಿದ್ದಾನೆ.[೯] ಈ ನಾಡಿನ ತಿರುಳು ಈ ಭಾಗದಲ್ಲಿದೆ. ತಿರುಳ್ಗನ್ನಡ ಎಂದರೇನು? ಈ ಪ್ರಶ್ನೆ ಅಂಥ ಗಂಭೀರವಾದುದೇನಲ್ಲ. ‘ತಿರು’ ಎಂಬ ಪದಕ್ಕೆ ಸುಮೇರಿಯನ್ನ ಭಾಷೆಯಲ್ಲಿ ‘ರಾಜ’ ಎಂಬ ಅರ್ಥ ನಂಜುಂಡಸ್ವಾಮಿಯವರು ನೀಡಿದ್ದಾರೆ.[೧೦] ಈ ಅಭಿಪ್ರಾಯಕ್ಕೆ ಇನ್ನು ಪುರಾವೆಗಳ ಅಗತ್ಯವಿದೆ. ‘ತಿರುಳು’ ಅಂದರೆ ಸತ್ವವುಳ್ಳದ್ದು, ಸಾರವತ್ತಾದದ್ದು, ಸೊಗಸಾದುದು ಎಂಬ ಅರ್ಥವ್ಯಾಪ್ತಿ ಹೊಂದಿದೆ. ಕನ್ನಡ ಭಾಷೆಯ ವಿಶೇಷ ಲಕ್ಷಣವನ್ನು ಸೂಚಿಸುವ ಈ ಪದ ಕನ್ನಡ ಪ್ರದೇಶದ ಸಾಂಸ್ಕೃತಿಕ ಹಾಗೂ ಭೌಗೋಳಿಕ ಶ್ರೀಮಂತಿಕೆಯನ್ನು ಸೂಚಿಸುತ್ತದೆ. ಆ ಕಾಲದ ಪುಲಿಗೆರೆಯ ಕನ್ನಡ ಉಳಿದ ಪ್ರದೇಶದ ಕನ್ನಡಕ್ಕಿಂತ ಭಿನ್ನವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ೭–೮ನೆಯ ಶತಮಾನದ ಶಾಸನಗಳಲ್ಲಿ ಉಲ್ಲೇಖವಿರುವ ಕನ್ನಡ ೯–೧೦ನೆಯ ಶತಮಾನಗಳ ಕಾವ್ಯಗಳಲ್ಲಿ ಸಮರ್ಥವಾಹಕವಾಗಿ ಬಳಕೆಯಾಗಿರುವುದನ್ನು ಗಮನಿಸಿದರೆ ಇಲ್ಲಿಯ ಭಾಷೆ ಹದವಾಗಿ, ಮುದವಾಗಿ ಬೆಳೆದಿತ್ತು ಎಂಬುದು ಸ್ಪಷ್ಟವಾಗುತ್ತದೆ. ತಿರುಳ್ಗನ್ನಡವೆಂದರೆ ದೇಶೀ ನಿಷ್ಠವಾದ ಮಾರ್ಗೀಯತೆಯನ್ನು ಒಳಗೊಂಡ ಸಮೃದ್ಧವಾದ ಕನ್ನಡ ಭಾಷೆಯೆಂದು ಹೇಳಬಹುದು.

**ಕನ್ನಡ ಎಂದರೆ ಅದೊಂದು ಭಾಷೆಯೇ?**

ನಾವು ನೀವು ಕನ್ನಡದ ಬಗ್ಗೆ ಇಲ್ಲಿಯವರೆಗೆ ಭಾವಿಸುತ್ತ ಬಂದಿರುವುದೇನೆಂದರೆ; ಕನ್ನಡ ಅಂದರೆ ಅದೊಂದು ಭಾಷೆಯ ಹೆಸರೆಂದು ಹೇಳಿ ಅದನ್ನು ಸಂಕಿರ್ಣಗೊಳಿಸುತ್ತ ಬಂದಿದ್ದೇವೆ ಎಂದು ಅನಿಸುತ್ತಿದೆ. ಹೀಗೆ ಭಾಷೆಯ ಹಿನ್ನೆಲೆಯಲ್ಲಿ ಹೆಸರುಗೊಂಡ ದೇಶವು ಜಗತ್ತಿನಲ್ಲಿ ಸಿಗುವುದು ದುರ್ಲಭ. ಕವಿರಾಜ ಮಾರ್ಗ ಬರೆದ ಶ್ರೀವಿಜಯ (ಕ್ರಿ.ಶ.೮೧೫) ತನ್ನ ಕೃತಿಯಲ್ಲಿ ಕನ್ನಡ ಪದವನ್ನು ‘ನುಡಿ’ ಎಂಬ ಅರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ. ಇದು ‘ದೇಶ’ ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದನ್ನು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಕರ್ನಾಟಕದ ವಿಸ್ತಾರವನ್ನು ಹೇಳುವಾಗ ‘ಕಾವೇರಿಯಿಂದಂ ಆ ಗೋದಾವರಿವರಂ ಇರ್ದ ನಾಡು ಅದು ಕನ್ನಡದೋಳ್ ಭಾವಿಸಿದ ಜನಪದಂ’ ಎಂದಿದ್ದಾನೆ. ‘ಕಬ್ಬಿಗರ ಕಾವಂ’ ಬರೆದ ಆಂಡಯ್ಯ(ಕ್ರಿ.ಶ.೧೨೩೫) ‘ಕನ್ನಡ ಎನಿಪ್ಪ ಆ ನಾಡು ಚೆಲ್ವಾಯ್ತು’ ಎಂದು ಧ್ವನಿ ಎತ್ತಿದ್ದಾನೆ. ಮತ್ತೆ ಈ ಕುರಿತು ಆಕರಗಳ ಮೊರೆ ಹೋದಾಗ ವಿಜಯ ನಗರದ ಕೃಷ್ಣದೇವರಾಯನ ಕಾಲದಲ್ಲಿದ್ದ ಅಲ್ಲಾಸಾನಿ ಪೆದ್ದನ್ನನು (ಈತನು ಆಂಧ್ರಕವಿ ಪಿತಾಮಹ ಎಂಬ ಬಿರುದು ಧರಿಸಿದವ) ಕನ್ನಡ ಶಬ್ದವನ್ನು ‘ನಾಡು’ ಎಂಬ ಅರ್ಥದಲ್ಲಿ ಬಳಸಿದ್ದನ್ನು ಕಾಣಬಹುದು. ಕೃಷ್ಣದೇವರಾಯನು ತೀರಿದ ಬಳಿಕ ಸಮಯ ಸಾಧಿಸಿ ವಿಜಯನಗರದ ಮೇಲೆ ದಂಡೆತ್ತಿಬಂದ ಗಜಪತಿಯನ್ನು ಕುರಿತು ಪೆದ್ದನ್ನನು “ಕನ್ನಡದೊಳೆಂತು ನುಗ್ಗುವೆ, ಗಜಪತೀಂದ್ರ? ತೆರೆದ ಮನೆಯೊಳಗೆ ನುಗ್ಗುವ ನಾಯಿಯಂತೆ” ಎಂದು ಆವೇಶದಿಂದ ನುಡಿದು ಕನ್ನಡರಾಜ್ಯದ ಬಗ್ಗೆ ತನ್ನ ಉಜ್ವಲಾಭಿಮಾನವನ್ನು ವ್ಯಕ್ತಪಡಿಸಿದ ಉದಾಹರಣೆಗಳು ಕಣ್ಮುಂದೆ ಇದೆ.‘ಕನ್ನಡ’ಎಂಬ ಪದದಲ್ಲಿ ಬೆರೆತುಕೊಂಡಿರುವ ಶಬ್ದಗಳು ಎರಡು. ‘ನಡ’ ಶಬ್ದವು ‘ನಾಡು’(ದೇಶ) ಪದದ ರೂಪಾಂತರವಾಗಿರಬೇಕು. ‘ಕನ್’ ಎಂಬ ಶಬ್ದದ ಅರ್ಥದ ಬಗ್ಗೆ ತೀವ್ರವಾದ ಮತಭೇದವಿದೆ. ಬಹುಶಃ ಈ ಶಬ್ದವು ಒಂದು ಜನಾಂಗವನ್ನು ಸೂಚಿಸುವಂತೆ ಕಾಣುತ್ತದೆ.

ಇದಕ್ಕೆ ನಿದರ್ಶನ ಕೊಡುವುದಾದರೆ, ಫಾದರ ಹೆರಾಸ್ ಬರೆದ ಕೆಲವು ಮಾತುಗಳು ಇಲ್ಲಿ ದಾಖಲಿಸುವುದು ಪ್ರಸ್ತುತವೆನಿಸುತ್ತದೆ. “ಸಿಂಧಪ್ರಾಂತದ ಮೋಹೆಂಜೋದಾರೋ ಸಂಸ್ಕೃತಿಯು ಮೂಲತಃ ಕನ್ನಡಿಗರದೆಂದು ಹೇಳಿದ್ದಾನೆ. ಮೋಹೆಂಜೋದಾರೋದ ಪಳಿಯುಳಿಕೆಗಳಲ್ಲಿ ಒಂದಾದ ಚಿತ್ರಲಿಪಿಯಲ್ಲಿ ಕಣ್ಣಿನ ಗುರುತಿನಿಂದ ಆ ಕಾಲದಲ್ಲಿ ‘ಕಣ್’ ಅಥವಾ ‘ಕನ್ನನೀರರು’ ಎಂಬ ಜನಾಂಗವು ಇದ್ದಿತೆಂದು ಹೇಳಿ, ಆ ಜನಾಂಗದವರೇ ಕನ್ನಡಿಗರ ಮೂಲಿಗರು ಎಂದು ಅಭಿಪ್ರಾಯ ಪಟ್ಟಿರುವುದು ಸತ್ಯವೇ ಆಗಿದೆ. ಮತ್ತೆ ಈ ಕುರಿತು ಸತ್ಯ ಸಂಶೋಧನೆಯ ಮೂಲಕ್ಕೆ ಹೋದರೆ ಬಹುಶಃ ಕನ್ನಡಿಗರ ಚರಿತ್ರೆಯು ೫೦೦೦ ವರ್ಷಗಳಷ್ಟು ಪ್ರಾಚೀನಕ್ಕೆ ಹೋಗುತ್ತದೆ. ಈ ‘ಕನ್ನನೀರರೇ’ ಮನುಸ್ಮೃತಿ ಮತ್ತು ಮತ್ಸ್ಯಪುರಾಣಗಳಲ್ಲಿ ‘ಕರ್ಣ’ರೆಂದು ಕರೆಯಿಸಿಕೊಂಡಿದ್ದಾರೆ. ಕನ್ನನೀರರ ನಾಡು ‘ಕನ್ನಾಡು’. ಅದು ಬರುಬರುತ್ತ ‘ಕನ್ನಡ’, ‘ಕರ್ನಾಟಕ’, ‘ಕರ್ನಾಟಕ’ವೆಂದು ರೂಪಾಂತರ ಹೊಂದುತ್ತ ಬಂದಂತೆ ತೋರುತ್ತದೆ.

ಐದು ಸಾವಿರ ವರ್ಷಗಳ ಹಿಂದಿನ ಮಾತು ಕ್ರಿ.ಶ.ಪೂ. ೨–೩ ನೇ ಶತಮಾನಗಳಲ್ಲಿ ಕರ್ನಾಟಕ ದೇಶವು ಅಸ್ತಿತ್ವದಲ್ಲಿ ಇತ್ತೆಂದು ಸಂಸ್ಕೃತ ಮಹಾಭಾರತವೇ ಪ್ರಬಲವಾದ ಸಾಕ್ಷಿಯನ್ನೊದಗಿಸುತ್ತದೆ. ಇದಲ್ಲದೇ ಕ್ರಿ.ಶ. ೨ ನೇ ಶತಮಾನದಲ್ಲಿ ರಚಿತವಾದ ‘ಮೃಚ್ಛಕಟಿಕ’ ನಾಟಕದಲ್ಲಿ

ಕರ್ನಾಟಕದ ಉಲ್ಲೇಖವು ಬಂದಿದೆ. ಸಂಸ್ಕೃತ ಸಾಹಿತ್ಯದಲ್ಲಿ ಈ ನಾಡು 'ಕರ್ನಾಟಕ'ವೆಂದು ಕರಯಿಸಿಕೊಳ್ಳುತ್ತಿತ್ತು. ನೆರೆಯನಾಡಾದ ತಮಿಳರು ಇದನ್ನು 'ಕರುನಾಡು' ಅಥವಾ 'ಕನ್ನಾಡು' ಎಂದು, ದೊಡ್ಡದೇಶ ಅಥವಾ 'ಎತ್ತರವಾದ ಪ್ರದೇಶ'ವೆಂದು ಕರೆದರೆ ಅತ್ತ ತೆಲುಗರು 'ಕನ್ನಡ ಅಥವಾ ಕರ್ನಾಟಕ'ರೆಂದು ಕರೆದರು.. ಮರಾಠಿಗರು 'ಕಾನಡಾ' ಎಂದು ಕರೆದಿದ್ದಾರೆ. ಪೋರ್ತಗಿಸರು, ಇಂಗ್ಲೀಷರು 'ಕೆನರಾ' ಅಥವಾ 'ಕರ್ನಾಟೆ' ಎಂದು ಕರೆದಿದ್ದಾರೆ. ಹೀಗೆ ಪ್ರಾಚೀನ ಕಾಲದಿಂದಲೂ ಭಾರತ ವರ್ಷದ ಒಂದು ಭಾಗವು 'ಕನ್ನಾಡ' ಅಥವಾ 'ಕರ್ನಾಟಕ'ವೆಂದು ಗುರುತಿಸಲ್ಪಟ್ಟಿತ್ತು ಎಂದು ಹೇಳಬಹುದು.

ಬಹುಕಾಲದಿಂದ ವಾಸಿಸಲ್ಪಡುತ್ತಿದ ಜನಾಂಗದ ಹೆಸರೇ ಈ ನಾಡಿಗೆ ಬಂದಿತು ಎಂದು ಅನೇಕ ಶಾಸನಗಳು ಸಹ ಮಾತಾಡುತ್ತವೆ. ಉದಾ: ಪೂನಾಜಿಲ್ಲೆ, ಸಿರೂರ ತಾಲೂಕಿನ ಶ.ಕ ೬೯೦ರ ಶಾಸನ 'ಕಾರ್ನಾಟಕಂ ವಲಮನನ್ತಮಜೇಯಮನ್ನ್ಯೈಃ...." ಎಂದು ಹೇಳಿದರೆ, ಕುರಂದವಾಡ ಸಂಸ್ಥಾನ ಆಲಾಬಗ್ರಾಮದ ಶ.ಕ ೯೬೭ ರ ಶಾಸನ 'ಕಾರ್ನಾಟಕಂ ವಲಮನನ್ತಮಜೇಯಮನ್ನ್ಯೈಃ.." ಎಂದು ಹೇಳಿದೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಶ.ಕ ೧೩೮೮ರ ಶಾಸನ "ಕರ್ನಾಟ ಲಕ್ಷ್ಮೀ(ಃ) ಸವಿಲಾಸಮಾಸ ಯಸ್ಮಿನ್ ಮಹೀಸೇಮಹನೀಯ ಕೀರ್ತ್ಯೌ" ಎಂದು ಹೇಳಿದೆ. ಬಳ್ಳಾರಿ ಜಿಲ್ಲೆಯ ಸೋಮಲಾಪುರ ಗ್ರಾಮದ ಶಕ೧೩೮೬ರ ಶಾಸನ "ಕರ್ನಾಟ ಲಕ್ಷ್ಮೀ(ಃ) ಸವಿಲಾಸಮಾಸ ಯಸ್ಮಿನ್ ಮಹೀಸೇಮಹನೀಯ ಕೀರ್ತ್ಯೌ" ಎಂದು ಹೇಳಿದೆ. ಮತ್ತೇ ಕೆಲವು ಶಾಸನಗಳು ಕರ್ನಾಟಕ ಕುಲದ ಬಗ್ಗೆ ಹೇಳಿವೆ. ಹಾಸನದ (ಶಾಸನ–೭೨ ಹಳೆಯ) "ಕರ್ನಾಟಕ ಕುಳಕಮಲ ಮಾರ್ತ್ತಂಡ ನಾಮಾದಿ ಪ್ರಶಸ್ತಿ ಸಹಿತನುಂ" ಎಂದು ಹೇಳಿದೆ. ಇದೇ ಜಿಲ್ಲೆಯ (ಹಳೆಯ ೭೬)"ಕರ್ನಾಟಕ ಕುಳಕಮಲ ಷಂಡಮಂಡನ ಪ್ರಚಂಡಮಾರ್ತ್ತಂಣ್ಡ...." ಎಂದು ಹೇಳಿದೆ. ಅರಸಿಕೆರೆಯ ಕ್ರಿ.ಶ ೧೧೬೩ರ (ಶಾ.ಸಂ.೧೭೨)"ಕರ್ನಾಟಕ ಕುಳಕಮಲ ಮಾರ್ತ್ತಂಡ" ಎಂದಿದೆ. ಕ್ರಿ.ಶ. ೧೧೬೨ ರ ಶಾಸನ "ಕರ್ನಾಟ ವಂಶೋದ್ಭವಂ" ಎಂದು ಹೇಳಿದೆ.

ಇನ್ನು ಕೆಲವು ಶಾಸನಗಳು ಕರ್ನಾಟಕ ಕ್ಷತ್ರಿಯ ಶಿರೋಮಣಿ, ಕರ್ನಾಟಕ ಕುಲಭೂಷಣ ಕನ್ನಡಾನ್ವಯ, ಕಂನ್ನಡಿಗ ಮೊನೆಯಾಳು, ಕನ್ನಡಿಗ ಸೇನಬೋನ ಮುಂತಾದ ಶಬ್ಬಗಳು ಕನ್ನಡಿಗರ ಪ್ರತೇಕ ಜಾತಿಯತೆಯ ಕಲ್ಪನೆಗಳು ತಾವು ಕನ್ನಡ ಕುಲದವರೆಂದು ಹೇಳಿಕೊಳ್ಳುತ್ತಿದ್ದುದ್ದರ ಬಗ್ಗೆ ದಾಖಲೆಗಳು ಸಿಗುತ್ತವೆ. ಕನ್ನಡಿಗರಿಗೆ ಈ ತಮ್ಮತನದ ಭಾವನೆ ಮಾತ್ರವಲ್ಲದೆ 'ಸಮಗ್ರ ಕರ್ನಾಟಕ'ದ ಕಲ್ಪನೆಯು ಇತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಕ್ರಿ.ಶ. ೪೫೦ ರ ಶಾಸನದಲ್ಲಿ 'ಕರ್ನಾಟ ಭೂವರ್ಗಭರ್ತಾರ'ನೆಂದು ಒಬ್ಬ ಅರಸನ ವರ್ಣನೆಯಿದೆ.(ಎಪಿಗ್ರಾಫಿಕಾ ಕರ್ನಾಟಿಕಾ– ಸಂಪುಟ–೭, PÉr–೧೬೨, ಕ್ರಿ.ಶ.೪೫೦)

## ರಾಜ ಭಾಷೆಯಾಗಿ ಪ್ರಾಕೃತ

ಪ್ರಾಚೀನ ಅವಶೇಷಗಳ ಶೋಧನೆಯಿಂದ ಬೇರೆ ಬೇರೆ ಕಾಲಗಳಲ್ಲಿ ನಾಲ್ಕು ಬಗೆಯ ಜನರು ವಾಸ ಮಾಡುತ್ತಿದ್ದರೆಂದು ನಾಲ್ಕು ಪದರಗಳ ಅವಶೇಷಗಳಿಂದ ತಿಳಿದು ಬರುತ್ತದೆ. ಮೇಲ್ಭಾಗದ ಮೊದಲನೆಯ ಪದರದಲ್ಲಿ ಚಾಳುಕ್ಯರ ಕಾಲದ ೧೦೦೦ ಕ್ರಿ.ಶ.ಕ್ಕೆ ಸಂಬಂಧಪಟ್ಟ ಹಾನೆಯೆಂಬ ಕಲ್ಲಿನಿಂದ ಕಟ್ಟಿದ ಕೋಟೆಯಿಂದ ಸುರಕ್ಷಿತವಾದ ನಗರ ಕಣ್ಣಿಗೆ ಬೀಳುತ್ತದೆ. ಎರಡನೇ ಪದರದಲ್ಲಿ ಸಾಮ್ರಾಟ ಅಶೋಕನ ಕಾಲದ ಸು. ಕ್ರಿ.ಪೂ. ೨೫೦ಕ್ಕೆ ಸಂಬಂಧಿಸಿದ 'ಇಸಿಲಾ' ನಗರದ ಅವಶೇಷಗಳು ಗೋಚರವಾಗುತ್ತವೆ. ಮೂರನೆಯ ಪದರದಲ್ಲಿ ಮಹಾಪ್ರಾಚೀನ ಕಾಲದ ಕಬ್ಬಿಣದ ಯುಗದ ನಗರದ ಅವಶೇಷಗಳು ಸಿಗುತ್ತವೆ. ದಕ್ಷಿಣ ಭಾರತದಲ್ಲಿ ಸಿಕ್ಕಿರುವ ಅವಶೇಷಗಳೆಲ್ಲಕ್ಕಿಂತ ಹಲವು ಶತಮಾನಗಳ ಹಳೆಯವು ಈ ಅವಶೇಷಗಳು. ಕಡೆಯದಾಗಿ ನಾಲ್ಕನೆಯ ಪದರದಲ್ಲಾದರೂ ಪ್ರಾಚೀನದಲ್ಲಿ ಪ್ರಾಚೀನ ಅವಶೇಷಗಳು ದೊರೆತಿವೆ

ಪ್ರಾಚೀನ ಸಂಸ್ಕೃತಿಯ ಸ್ಥಿತಿಗತಿಗಳ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಸಿಂಧೂ ಕಣಿವೆಯಲ್ಲಿ ನಡೆಸಿದ ಉತ್ಖನನದಿಂದಾಗಿ ಪದರಗಳಲ್ಲಿ ದೊರೆತವುಗಳಿಗಿಂತ ಹಳೆಯದು. ಅಲ್ಲಿಯ ಅಧಿಕಾರಿಗಳು ಪ್ರಾಕೃತವನ್ನೇ ಉಪಯೋಗಿಸುತ್ತಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದು. ಆಡಳಿತ ಸುಗಮವಾಗಿ ನಡೆಸಲು ಎರಡೂ ಪ್ರಾಂತ್ಯಗಳಲ್ಲೂ ಪ್ರಾಕೃತವನ್ನೇ ರಾಜಭಾಷೆಯನ್ನಾಗಿ ಮಾಡುವುದೊಂದು ಸಾಧಾರಣ ವಾಡಿಕೆ. ಈ ವಾಡಿಕೆ ವಿರುದ್ಧವಾಗಿ ಇಲ್ಲಿ ನಡೆಯಲಾರದು.

ಜನರಿಗೆ ರಾಜಭಾಷೆ ತಿಳಿದುಕೊಳ್ಳಲು ಆಳರಸರು ಅಲ್ಲಲ್ಲಿ ತಮ್ಮ ಭಾಷೆಯನ್ನು ಜನರಿಗೆ ಕಲಿಸಲು ಶಾಲೆಗಳನ್ನು ತೆರೆದಿರಬೇಕು. ಬ್ರಹ್ಮಗಿರಿ, ಜಟಿಂಗರಾಮೇಶ್ವರ ಗುಡ್ಡ ಮುಂತಾದ ಕನ್ನಡ ನಾಡಿನ ಮಧ್ಯರಾಷ್ಟ್ರದಲ್ಲಿ ಅಶೋಕ–ಪ್ರಾಕೃತ ಶಾಸನಗಳ ಪ್ರಕಟಣೆಯಿಂದ, ಕಟಕ್ ಜಿಲ್ಲೆಯ ದೌಲಿಶಾಸನ (ದೌಲಿಭುವನೇಶ್ವರದ ಬಳಿ ಇದೆ) ಗಂಜಾಂ ಜಿಲ್ಲೆಯ ಚೌಗಡದ ಶಾಸನಗಳಿಂದಲು ಸಹ ಜನರಿಗೆ ಪಾಳಿ ಅಥವಾ ಪ್ರಾಕೃತವು ಚೆನ್ನಾಗಿ ಗೊತ್ತಾಗುತ್ತಿದ್ದಿತೆಂದೂ, ಮಠಗಳಲ್ಲೂ, ಶಾಲೆಗಳಲ್ಲೂ ಅವುಗಳನ್ನು ಜನರು ಕಲಿಯುತ್ತಿದ್ದರೆಂದೂ ಸ್ಪಷ್ಟವಾಗುತ್ತದೆ. ಮಿತ್ರರಾಜ್ಯಗಳೆಂದು ಅಶೋಕನ ಶಾಸನಗಳಲ್ಲಿ ಸೂಚಿತ ಚೋಳ, ಪಾಂಡ್ಯ, ಕೇರಳ ರಾಜ್ಯಗಳಲ್ಲಿ ಎಲ್ಲಿಯೂ ಇಂತಹ ಶಾಸನಗಳು ಇಲ್ಲದೆ ಇರುವುದರಿಂದ ತಮಿಳರಿಗೂ, ಕೇರಳರಿಗೂ, ಪಾಂಡ್ಯರಿಗೂ ಪ್ರಾಕೃತವೂ ಗೊತ್ತಾಗುತ್ತಿದ್ದಿಲ್ಲವೆಂದು ಊಹಿಸಬಹುದಾಗಿದೆ.

ಮೌರ್ಯ ಪ್ರಭುತ್ವಾನಂತರ ಕರ್ನಾಟಕ ಎಂಬಂತೆ– ಆಂಧ್ರ ರಾಜ್ಯಗಳಲ್ಲಿ ಶಾತವಾಹನರು ಮತ್ತು ಚುಟು ಅಥವಾ ನಾಗವಂಶೀಯರು ಆಳ್ವಿಕೆ ಮಾಡತೊಡಗಿದರು. ಇವರ ಆಳ್ವಿಕೆಯಲ್ಲಿ ಪ್ರಾತೃವೇ ರಾಜಭಾಷೆಯಾಗಿರುವುದನ್ನು ಕ್ರಿ.ಶ. ೨೬೩ ಕಾಲದ ಶಾತಕರಣಿಯ ಪ್ರಾಕೃತಶಾಸನ ಆಂಧ್ರದ ಗೋದಾವರಿ ಜಿಲ್ಲೆ ಕೊಡುಮೆಲುವಿನ ಚಂದ್ರಶಾತನ ಪ್ರಾಕೃತ ಶಾಸನವು ಮತ್ತು ಕೃಷ್ಣ ತೀರದ ಅಮರಾವತಿಯ ಪ್ರಾಕೃತ ಭಾಷೆಯಲ್ಲಿರುವ ಶಿವಸ್ವಾತಿಯ ಶಾಸನವು ಬಲ ನೀಡುತ್ತದೆ. ಈ ಶಾಸನಗಳು ೩ನೆಯ ಶತಮಾನಕ್ಕಿಂತ ಹಿಂದಿನವೇ ಹೊರತು ೩ನೆಯ ಶತಮಾನದ ಈಚಿನವಲ್ಲ ಎಂದು ಗಮನಿಸಬೇಕು.

ಶಿಕಾರಿಪುರ ತಾಲೂಕು ಮಳವಳ್ಳಿಯ ೨೬೪ನೆಯ ಶಾಸನವು ಶಾತಕರ್ಣಿಗಳ ಪ್ರಭುತ್ವ (ಮೈಸೂರು) ವಾದೊಡನೆ ಆಳ್ತನವನ್ನ ವಹಿಸಿದ ಕದಂಬವಂಶದ ಶಿವವರ್ಮನ ಕಾಲದ್ದು, ಅರಸನ ಭಾಷೆಯೂ ಪ್ರಾಕೃತವೇ ಆಗಿದೆ. ಅಂದಮೇಲೆ ಕರ್ನಾಟಕದಲ್ಲಿ ಸುಮಾರು ಕ್ರಿ.ಶ. ೪ನೇ ಶತಮಾನಾಂತ್ಯದವರೆಗೂ ಪ್ರಾಕೃತವೇ ರಾಜಭಾಷೆಯಾಗಿತ್ತೆಂದು ಭಾವಿಸಲು ಅವಕಾಶವಿದೆ. ಚಾಲುಕ್ಯರ ಕಾಲದಲ್ಲಿ ೬ನೆಯ ಶತಮಾನದಷ್ಟೊತ್ತಿಗೆ ಚಾಳುಕ್ಯರ ಪ್ರಭುತ್ವ ಆರಂಭವಾಯಿತು. ಈ ಕಾಲದವರೆಗೆ ಪ್ರಭುತ್ವ ಭಾಷೆಯಾಗಿದ್ದ ಪ್ರಾಕೃತದ ಸ್ಥಾನದಲ್ಲಿ ಕನ್ನಡ ರಾಜಭಾಷೆಯಾದಂತೆ ಕಾಣುತ್ತದೆ. ಚಾಳುಕ್ಯದ ಪ್ರತಿಯೊಂದು ಶಾಸನಗಳನ್ನ ಅಧ್ಯಯನ ಮಾಡುತ್ತ ಹೋದಾಗ ಅವರು ಹಾಕಿಸಿದ ಶಾಸನಗಳೆಲ್ಲವೂ ಕನ್ನಡದಲ್ಲೇ ಬರೆಸಿರುವುದು ಕಾಣಬರುತ್ತದೆ. ಈ ೬ನೆಯ ಶತಮಾನದ ಚಾಳುಕ್ಯರ ಕಾಲದ ಕನ್ನಡ ಭಾಷೆಗೂ ೯ನೆಯ ಶತಮಾನದ ಕನ್ನಡ ಭಾಷೆಗೂ ೯ನೆಯ ಶತಮಾನದ ಸಂಸ್ಕೃತ, ಪ್ರಾಕೃತ ಮಿಶ್ರಿತ ಶಬ್ದ ಪುಂಜವಾದ ನೃಪತುಂಗನ ಕವಿರಾಜಮಾರ್ಗದ ಕನ್ನಡ ಭಾಷೆಗೂ

ಅಂತಹ ವ್ಯತ್ಯಾಸವೇನು ಕಂಡುಬರುವುದಿಲ್ಲ. ಹೀಗಿದ್ದಾಗ ಕ್ರಿ.ಶ. ಪೂರ್ವ ೩೦೦ರಿಂದ ಕ್ರಿ.ಶ. ೫೦೦ರ ವರೆಗೆ ಅಂದರೆ ಸುಮಾರು ೮೦೦ ವರ್ಷಗಳವರೆಗೆ ಕನ್ನಡ ಭಾಷೆ ಹೇಗಿದ್ದಿತು ಎಂಬುದು ತಿಳಿದುಕೊಳ್ಳಲು ಅವಕಾಶವೇ ಇಲ್ಲ.

**ವೈವಿಧ್ಯಮಯ ಕನ್ನಡಗಳು**

ಗಂಗರ ಕನ್ನಡ, ಕದಂಬರ ಕನ್ನಡ, ಚಾಲುಕ್ಯರ ಕನ್ನಡ, ರಾಷ್ಟ್ರಕೂಟರ ಕನ್ನಡ, ಹೊಯ್ಸಳರ ಕನ್ನಡ, ವಿಜಯನಗರದ ಕನ್ನಡ, ಮೈಸೂರು ಕನ್ನಡ, ಕೊಡಗು ಕನ್ನಡಗಳೆಂಬ ಅನೇಕ ಕನ್ನಡಗಳ ಪ್ರಸ್ತಾಪಗಳಿವೆ.

**ವಿವಿಧ ನಾಡು- ವಿಭಾಗಗಳ ಪ್ರಸ್ತಾಪ**

ಕುಂತಲನಾಡು, ಮಾಸೇವಾಡಿ ನಾಡು, ಬೆಳ್ವಲನಾಡು, ಪುಲಿಗೆರೆನಾಡು ಅಖಂಡ ಕರ್ನಟಕದ ವಿಚಾರಗಳಿವೆ. ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳಿವೆ. ಪ್ರಾಚೀನ ಕವಿರಾಜಮಾರ್ಗ ಕಾಲದ ಅಖಂಡ ಕರ್ನಾಟಕದ ಇತಿಹಾಸವಿದೆ, ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದಾಯಾದಿ ಕಲಹದಿಂದಾಗಿ ಬಿರುಕು ಬಿಟ್ಟ ಕರ್ನಾಟಕದ ಚಾರಿತ್ರಿಕ ಶಾಸನ ದಾಖಲೆಗಳಿವೆ, ಹೊಯ್ಸಳರ ಕಾಲದಲ್ಲಿ ಹೋಳಾದ ಕರ್ನಾಟಕ ಮತ್ತು ಮಹಮ್ಮದೀಯರ ಕಾಲದಲ್ಲಿ ಹಾಳಾದ ಕರ್ನಾಟಕದ ಇತಿಹಾಸವಿದೆ. ಇಂಗ್ಲಿಷರು ರೂಪಿಸಿದ ಪ್ರಾಂತೀಯ ಕರ್ನಾಟದ ವಿವರಗಳು ಇವೆ. ಇದು ಭಾಷಿಕ ಕರ್ನಾಟಕಕ್ಕೆ ತಿರುಗಿದ ಕರ್ನಾಟಕ ಕೊನೆಗೆ ಏಕೀಕೃತ ಕರ್ನಾಟಕವಾದ ಇತಿಹಾಸವಿದೆ. ಇವುಗಳ ಅಭ್ಯಾಸ ಇಂದು ಮಾಡಬೇಕಾದ ತುರ್ತು ನಮ್ಮ ಮುಂದಿದೆ.

ರಾಜರು, ಅರಸು ಕುಮಾರರು, ಅವರ ಸಂಬಂಧಿಗಳು, ಸಾಮಂತ ಅರಸರು, ಅಧಿಕಾರಿಗಳು ಖುದ್ದಾಗಿ ಶಾಸನಗಳನ್ನು ರಚಿಸಿದ್ದಾರೆ. ಅನೇಕ ರಾಜರು, ಸಂಧಿವಿಗ್ರಹಿಗಳು ಶಾಸನ ಹೊರಡಿಸಿದವರಿದ್ದಾರೆ, ರಾಜರು ಹಾಕಿಸಿದ ಮುದ್ರಾಶಾಸನಗಳಿವೆ. ರಾಜಾಜ್ಞೆ ಪಡೆದು ಕುಕವಿಗಳು, ಶ್ರೇಷ್ಠಕವಿಗಳು, ಆಶುಕವಿಗಳು ಸೇರಿ ಶಾಸನಗಳನ್ನು ಬರೆದಿದ್ದಾರೆ. ಕವಿಗಳು ಬರೆದ ಶಾಸನ ಪಾಠಗಳನ್ನು ರಾಜರುಗಳ ಮುಂದೆ ಓದಿ ಹೇಳಿದ ವಿದ್ವಾಂಸರಿದ್ದಾರೆ. ಅವರು ಪಡೆದ ರಾಜಾಶ್ರಯ, ಅವರಿಂದ ಪಡೆದ ಫಲಗಳ ವಿವರಗಳಿವೆ. ಕವಿಗಳು ಹೇಳಿದ ಶಾಸನಗಳನ್ನು ಎಲೆಗಳ ಮೇಲೆ ಬರೆದುಕೊಟ್ಟ ಶ್ರೇಷ್ಠ ಲಿಪಿಕಾರರಲ್ಲದೆ, ಬಿರುದು ಹೊಂದಿದ ಮತ್ತು ಆತ್ಮಪ್ರಶಂಸೆ ಮಾಡಿಕೊಂಡ ಲಿಪಿಕಾರರ ಸಾಹಿತ್ಯವಿದೆ. ಅದರಲ್ಲಿ ಅನೇಕ ವಾಸ್ತವ- ಅರೆವಾಸ್ತವ ಕಲ್ಪನೆಗಳಿರುವುದೂ ಕಂಡು ಬರುತ್ತವೆ. ಶಾಸನ ಲಿಪಿ ಕೆತ್ತಿದ ರೂವಾರಿಗಳಿದ್ದಾರೆ. ಶಾಸನ ಉತ್ಕೀರ್ಣ ಮಾಡಿದವರು, ಶಾಸನ ಸಂದೇಶಕಾರರ ಕುರಿತ ದಾಖಲೆಗಳಿವೆ.

ರಾಜರ ಉಡಿಗೆ- ತೊಡಿಗೆಗಳ ಪ್ರಸ್ತಾಪವಿದೆ, ನೃತ್ಯಕಾರ್ತಿಯರ ಚಿತ್ರಣಗಳಿವೆ, ವಿವಿಧ ಬಗೆಯ ಸಂಗೀತಕಾರರಿದ್ದಂತೆ ಅನೇಕ ಪಡೆವಳರ ಚಿತ್ರಣಗಳಿವೆ. ಕಲ್ನಾಟುಗಳಂತ ತೆರಿಗೆಗಳಿವೆ, ಗಾವುಂಡರ, ಸೂಳೆಯರ ಚರಿತ್ರೆಗಳಿವೆ. ಹಿರಿಯ ಕೋಲು- ಕಿರಿಯ ಕೋಲು, ಗಡಿಂಗಬಗಳಂಥ ಹೊಲ ಮಾಪನ ಮಾಡುವ ಮಾಪನಗಳ ವಿವರಗಳಿವೆ. ಸೇಣಿಗರ, ಹಿಟ್ಟುಕಾರರಂಥ ವರ್ತಕ ವರ್ಗದ ಚಹರೆಗಳಿವೆ. ಐವದಿಂಬರ, ಎಲೆಯ ಬೊಜಂಗರ ವಿವಿಧ ವೃತ್ತಿಕಾರರ ಪ್ರಸ್ತಾಪಗಳಿವೆ. ಊರ ಕಾಯುವ ತಳವಾರರಿದ್ದಂತೆ ಭಾಂಡಾರದ ಅಧಿಕಾರಿಗಳೂ ಇದ್ದಾರೆ. ತೆನಂದಕರು, ಅಲ್ಲಾಳರಂಥ ಜಾನಪದ ಬುಡಕಟ್ಟುಗಳ ವಿವರಗಳಿವೆ. ಮಾದಿಗ- ಹರಿಜನರಂಥ ಕೆಳವರ್ಗದವರ ಪ್ರಸ್ತಾಪಗಳಿವೆ. ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಮೇಲ್ವರ್ಗದ ಗೋತ್ರಗಳಿವೆ.

ಕನ್ನಡಿಗರ ಜನಜೀವನದ ಸಂಸ್ಕೃತಿಯಿದೆ. ಅರಸರ ಕಾಲದ ಶಾಲೆಗಳೆನಿಸಿದ ಅಗ್ರಹಾರಗಳು ಹೇರಳ ಸಂಖ್ಯೆಯಲ್ಲಿ ಸಿಗುತ್ತವೆ. ಇಂದು ಗುರುತು ಸಿಗದಂಥ ಪ್ರಾಚೀನ ಗ್ರಾಮಗಳ ಕರೆ, ಭಾವಿಗಳ ವಿವರಗಳಿವೆ. ಹೀಗೆ ಶಾಸನ ಎಂಬ ಸಮುದ್ರದಲ್ಲಿ ಧೈರ್ಯದಿಂದ ಧುಮುಕಿ ಶ್ರಮವಹಿಸಿ ಕಲಾತ್ಮಕವಾಗಿ ಈಜಿ ಅಲ್ಲಿ ವಿಸ್ಮೃತಿಗೆ ಒಳಗಾಗಿರುವ ಅಂಶಗಳನ್ನು ಸೂಕ್ಷ್ಮಮತಿಯಿಂದ ಓದಿ ಸರಿಯಾಗಿ ಅರ್ಥೈಸಿಕೊಂಡು ಪ್ರಚಲಿತ, ಅಪ್ರಚಲಿತ ಕನ್ನಡದ ಅಸ್ಮಿತೆಗಳನ್ನು ಜಗತ್ತಿಗೆ ಸಾರಬೇಕಾದ ತುರ್ತನ್ನು ಶಾಸನ ಸಾಹಿತ್ಯದ ಅಭ್ಯಾಸಿಗಳು ಸವಾಲೆಂಬಂತೆ ಸ್ವೀಕರಿಸಬೇಕಾಗಿದೆ.

**ಕೊನೆಯ ಟಿಪ್ಪಣಿಗಳು**

1. ಇ.ಸಿ-ಸಂಪುಟ-೧೧- ಸಿಪಿ-೪೩)
2. ಕವಿರಾಜಮಾರ್ಗ-ಪದ್ಯ-೧-೩೭
3. ಸಂ.ಎಂ.ಎಂ. ಕಲಬುರ್ಗಿ-ಕೇಶಿರಾಜನು ತನ್ನ ಶಬ್ದಮಣಿದರ್ಪಣ
4. ದಖ್ಖನ ಅಥವಾ ಮಹಾರಾಷ್ಟ್ರ ಚರಿತ್ರೆಯ ಪ್ರಸ್ತಾವನೆಯಿಂದ
5. ಕ.ಸಾ.ಪ.ಪತ್ರಿಕೆ, ಸಂಪುಟ-೧, ಸಂಚಿಕೆ-೨೭೬-೨೭೭
6. ಕವಿರಾಜಮಾರ್ಗ-ಪರಿಚ್ಛೇದ-೧,೪-೨೨
7. ಪಂಪ ಭಾರತ-ಆಶ್ವಾಸ-೧೪-೧೮
8. ಪಂಪ ಭಾರತ-ಆಶ್ವಾಸ-೧೪-೧೮
9. ರನ್ನಕವಿಯ-ಸಾಹಸಭೀಮ ವಿಜಯ-೧-೪೬
10. ಎಂ.ನಂಜುಂಡಸ್ವಾಮಿ-ಭಾರತದ ಮೊದಲದೊರೆಗಳು